# ಹಂಪಿ ಟೈಮ್ಸ್

HAMPI TIMES

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

ಕನ್ನಡ ದಿನಪತ್ರಿಕೆ
KANNADA DAILY



ಇಂದು ಹಾಗೂ ಹಿಂದಿನ
ಹಂಪಿ ಟೈಮ್ಸ್ ಕಲರ್‌ಫುಲ್
ಇ-ದಿನಪತ್ರಿಕೆ ಓದಲು QR
ಕೋಡ್ ಸ್ಕ್ಯಾನ್ ಮಾಡಿ ಓದಿರಿ
No.1 Leading in Local News Paper
70,000
HAMPI TIMES E-PAPER READERS
94486 33038 | NEWS PAPER ADD - THE BEST ADVERTISING PLATFORM TO BOOST YOUR BUSINESS
E-mail: hampitimes@gmail.com | # Valmiki Circle hospet-583201



| | | | | | | | |
|---|---|---|---|---|---|---|---|
| ಸಂಪುಟ:01 | ಸಂಚಿಕೆ:342 | ನೋಂದಣಿ ನಂ.:KARKAN27911 | ವಿಜಯನಗರ | 16.06.2024 | ಭಾನುವಾರ | ಪುಟ:04 | ಬೆಲೆ:2 |
| Volume:01 | Issue:342 | Reg.No:KARKAN27911 | VIJAYANAGARA | 16.06.2024 | Sunday | Page:04 | Rs:2 |




## ಹಂಪಿ ಟೈಮ್ಸ್ ಸಂಪಾದಕೀಯ

# ಮತ್ತೊಮ್ಮೆ ಎನ್‌ಡಿಎ ಸರ್ಕಾರ ಆಶಯಗಳು ಆಗಲಿ ಸಾಕಾರ

ಕೊನೆಗೂ ಕೇಂದ್ರದಲ್ಲಿ ಎನ್‌ಡಿಎ ಸರ್ಕಾರ ರಚನೆಯಾಗಿದೆ. ಪ್ರಧಾನ ಮಂತ್ರಿಯಾಗಿ ನರೇಂದ್ರ ಮೋದಿ ಅವರು ಮೂರನೇ ಬಾರಿಗೆ ಪ್ರಮಾಣವಚನ ಸ್ವೀಕರಿಸಿದ್ದಾರೆ. ಜವಾಹರ ಲಾಲ್ ನೆಹರೂ ನಂತರ ಮೂರನೇ ಬಾರಿಗೆ ಪ್ರಧಾನಮಂತ್ರಿಯಾಗಿ ಅಧಿಕಾರ ನಡೆಸುತ್ತಿರುವ ನರೇಂದ್ರ ಮೋದಿಗೆ ಕಳೆದ ಎರಡು ಅವಧಿಯಲ್ಲಿದ್ದ ಸ್ವಾತಂತ್ರ್ಯ ಈಗಿಲ್ಲ ಎನ್ನುವುದು ಸ್ಪಷ್ಟ. ಕಳೆದ ಭಾನುವಾರ ನರೇಂದ್ರ ಮೋದಿ ಅವರೊಂದಿಗೆ 72 ಸಂಸದರು ಸಚಿವರಾಗಿ ಪ್ರಮಾಣವಚನ ಸ್ವೀಕರಿಸಿದ್ದಾರೆ. ನರೇಂದ್ರ ಮೋದಿ ಬಳಗದಲ್ಲಿ ಅನುಭವಿ ಸಂಸದರು ಸಚಿವರಾಗಿರುವುದು ಸಮಾಧಾನ ತಂದಿದ್ದು, ನಿರೀಕ್ಷೆಗಳು ಸಾಕಾರವಾಗುತ್ತವೋ ಎಂಬುದನ್ನು ಭವಿಷ್ಯದಲ್ಲಿ ನಿರ್ಧಾರವಾಗುತ್ತದೆ. ಆದರೂ, ಅನುಭವಿ ಮತ್ತು ಹೊಸಮುಖಗಳಿಂದ ಸಂಯುಕ್ತವಾಗಿರುವ ಮತ್ತು ಸಮತೋಲಿತ ಸಂಪುಟ ರಚನೆ ಆಗಿರುವುದಂತೂ ಸತ್ಯ. ಈ ಮೂಲಕವಾದರೂ ಬಲಿಷ್ಠ ಭಾರತ ನಿರೀಕ್ಷಿಸಬಹುದು. ಅಚ್ಚರಿಯೆಂಬಂತೆ ಈ ಬಾರಿ ದಕ್ಷಿಣದ ರಾಜ್ಯಗಳ ಸಂಸದರಿಗೆ ಆದ್ಯತೆ ನೀಡಿರುವುದು. ನಮ್ಮ ಕರ್ನಾಟಕದಿಂದ ಪ್ರಹ್ಲಾದ ಜೋಶಿ, ನಿರ್ಮಲಾ ಸೀತಾರಾಮನ್, ಎಚ್.ಡಿ.ಕುಮಾರಸ್ವಾಮಿ, ಶೋಭಾ ಕರಂದ್ಲಾಜೆ, ವಿ.ಸೋಮಣ್ಣ ಅವರು ಸಂಪುಟ ಪ್ರವೇಶಿಸಿದ್ದಾರೆ. ಇದರೊಂದಿಗೆ ಎನ್‌ಡಿಎದಲ್ಲಿರುವ ಎಲ್ಲ ಪಕ್ಷಗಳಿಗೂ ಸಂಪುಟದಲ್ಲಿ ಸ್ಥಾನ ನೀಡಲಾಗಿದೆ. ಅನುಭವಿಗಳ ಜತೆಜತೆಗೇ ಯುವಮುಖಗಳಿಗೆ, ಮಹಿಳೆಯರಿಗೆ ಆದ್ಯತೆ ನೀಡಲಾಗಿದೆ. ಕಳೆದ 2014 ಮತ್ತು 2019ರಲ್ಲಿ ನಡೆದ ಚುನಾವಣೆಯಲ್ಲಿ ಬಿಜೆಪಿಗೆ ಸ್ಪಷ್ಟ ಬಹುಮತ ಇದ್ದುದ್ದರಿಂದ ಮೈತ್ರಿಪಕ್ಷಗಳ ಒತ್ತಡ–ಕಿರಿಕಿರಿ ಬಂದಿರಲಿಲ್ಲ. ಇದು ಆಡಳಿತದಲ್ಲಿ ಸ್ವತಂತ್ರವಾಗಿ ಮತ್ತು ನಿರ್ಭಯವಾಗಿ ನಿರ್ಧಾರ ತೆಗೆದುಕೊಳ್ಳಲು ಅವಕಾಶವಿತ್ತು. ದಶಕಗಳಿಂದ ದೇಶದ ಜನರು ನಿರೀಕ್ಷಿಸುತ್ತಿದ್ದ ನಿರ್ಧಾರಗಳೂ ಜಾರಿಗೆ ಬಂದು, ಹಲವು ಬದಲಾವಣೆಗಳು ಆಗಿವೆ. ಇದರಲ್ಲಿ ಪ್ರಮುಖವಾದುದು ಏನೆಂದರೆ ಜಮ್ಮು–ಕಾಶ್ಮೀರಕ್ಕೆ ನೀಡಲಾಗಿದ್ದ ವಿಶೇಷ ಸ್ಥಾನಮಾನ ವಾಪಸು ಪಡೆದಿದ್ದು, ಅಯೋಧ್ಯೆಯಲ್ಲಿ ಶ್ರೀರಾಮ ಮಂದಿರದ ನಿರ್ಮಾಣ ಮಾಡಿದ್ದು, ತ್ರಿಳಿ ತಲಾಖ್ ರದ್ದು ಮಾಡಿದ್ದು, ಸಿಎಎ ಜಾರಿ ಇದಕ್ಕೆ ಕೆಲ ನಿದರ್ಶನಗಳು. ಮೊದಲ ಹಾಗೂ ಎರಡನೇ ಅವಧಿಯಲ್ಲಿ ಹಲವು ಸಾಮಾಜಿಕ ಕಾರ್ಯಕ್ರಮಗಳು ಕ್ರಾಂತಿ ಮಾಡಿದವು. ಈಗೇನಿದ್ದರೂ ಹಳೆಯ ಯೋಜನೆಗಳನ್ನು ಮುಂದುವರಿಸುವ ಜತೆಗೆ ನೂತನ ಯೋಜನೆಗಳು, ಕಾರ್ಯಕ್ರಮಗಳನ್ನು ಅನುಷ್ಠಾನ ಮಾಡುವ ಮತ್ತು ಅವುಗಳನ್ನು ಪರಿಣಾಮಕಾರಿಯಾಗಿ ಕೊನೆ ವ್ಯಕ್ತಿಗೂ ತಲುಪಿಸುವ ಹೊಣೆಗಾರಿಕೆ ಎನ್‌ಡಿಎ ಸರ್ಕಾರದ ಮೇಲಿದೆ. ಎಂದಿನಂತೆ ಮೂರನೇ ಅವಧಿಯಲ್ಲಿ ಜನರ ನಿರೀಕ್ಷೆಗಳು ಹೆಚ್ಚಿವೆ. ಇಡೀ ಸಂಪುಟ ಬದ್ಧತೆ ಮತ್ತು ನಿಷ್ಠೆಯಿಂದ ಕಾರ್ಯನಿರ್ವಹಿಸಬೇಕಿದೆ. ಜನರ ಆಶೋತ್ತರಗಳನ್ನು ಪೂರ್ಣಗೊಳಿಸಬೇಕಿದೆ. ಮೈತ್ರಿಧರ್ಮವನ್ನು ಪಾಲಿಸುತ್ತಲೇ ಯಾವುದೇ ಗೊಂದಲ–ಭಿನ್ನಮತ ಮತ್ತು ಜಗಳ ಇಲ್ಲದಂತೆ ವಿಕಸಿತ ಭಾರತದ ಕನಸನ್ನು ನನಸಾಗಿಸುವತ್ತ ಶ್ರಮಿಸಬೇಕಿದೆ.

### ಮಕ್ಕಳು ಅರಸರಾಗಬೇಕೆ?

**ಓದಲು ಸಮಯವಿಲ್ಲವೆಂದು ಪತ್ರಿಕೆಯನ್ನು ಕೈ ಬಿಡಬಾರದು, ಕನ್ನಡ ಪತ್ರಿಕೆಯೊಂದು ಕೈಯಲ್ಲಿಡಿದರೆ, ಹಿರಿಯರನ್ನು ಅನುಸರಿಸುವ ಮಕ್ಕಳು ಮೊಬೈಲ್ ಬಿಟ್ಟು ಅಕ್ಷರ ದಾಸರಾಗುತ್ತಾರೆ. ಅಕ್ಷರ ದಾಸರಾದರೆ ಅರಸರು ಆಗಬಲ್ಲರಲ್ಲವೇ ?**

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

**ಬೆಳಕಿನ ಹಾದಿ:** ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

**ಸಂಪಾದಕರು:** ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ. ಇ–ಮೇಲ್:hampitimes@gmail.com
M: 94486 33038

## ಓದುಗರ ಗಮನಕ್ಕೆ

**ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.**

**– ಜಾಹೀರಾತು ವ್ಯವಸ್ಥಾಪಕರು.**

# ಅವಳೇಕೆ ಹೀಗೆ...? ಮಾತು ಮರೆಸುವ ಮುನ್ನ....

ಏನೆ ಹೇಳಿದರೂ ನಾವು ನಿಮ್ಮಂತೆ ಇರಲಿಕ್ಕೆ ಆಗೊದಿಲ್ಲ ಅಮ್ಮಾ... ಅಮ್ಮನ ತೊಡೆಯ ಮೇಲೆ ತಲೆಯನ್ನು ಇಟ್ಟು ಬಿಕ್ಕಿ ಬಿಕ್ಕಿ ಅಳುತ್ತಿದ್ದ ಎದೆಯುದ್ದದ ಮಗ, ಅಂದು ಸಂಪೂರ್ಣ ಸೋತು ಹೊಗಿದ್ದ. ಹೇಳಲಿಕ್ಕೆ ಇನ್ನೇನು ಉಳಿದಿಲ್ಲ ಅಮ್ಮ ಇಲ್ಲಿಗೆ ಎಲ್ಲಾ ಮುಗಿದು ಹೋಹಿತು ಅನಿಸುತ್ತಿದೆ. ಅಮ್ಮಾ ... ಹಾಗಂತ ಅವಳೇನು ಕೆಟ್ಟವಳಲ್ಲ ಅಮ್ಮ, ಆದರೂ ಎಷ್ಟೂ ಅಂತಹ ನಾನೆ ಸಹಿಸಿಕೊಳ್ಳಲಿ, ಸಾಕಾಗಿ ಹೋಗಿದೆ ಅಮ್ಮ ನನಗೆ, ಅತ್ತ ಕಡೆ ಆಫೀಸು ಕೆಲಸ ಟಾರ್ಗೆಟ್ಟು, ಕ್ಲೆಂಟ್ಸ್ ತಲೆನೋವು ಆಗಿಬಿಟ್ಟಿವೆ. ಜೊತೆಗೆ ತಿಂಗಳ ಖರ್ಚು, ಮನೆ ಬಾಡಿಗೆ, ಕಾರಿನ ಇ ಎಂ ಐ, ಮಗನ ಸ್ಕೂಲ್ ಫೀ ಯಾವುದು ಅಂತಹ ನೋಡಲಿ ಏನು ಅಂತಹ ಮಾಡಲಿ ಹೇಳು? ಮಗನ ತಲೆಯನ್ನ ನವಿರಾಗಿ ಸವರುತ್ತಿದ ಅಮ್ಮ ಸಮಾದಾನದಿಂದ ಎಲ್ಲವನ್ನು ಕೇಳಿಸಿಕೊಳ್ಳುತ್ತಿದ್ದಳು. ಒಂದು ಲೆಕ್ಕದಲ್ಲಿ ನಾನು ಮನೆಯಲ್ಲಿ ದುಡಿಯಲಿಕ್ಕೆ ಇರುವುದೇನೊ ಅನ್ನುವಂತಾಗಿದೆ ಮನೆಗೆ ಬಂದರೆ ಯಾವಾಗ ಬಂದೆ, ಕೊಡು ಬ್ಯಾಗನ್ನು ಕುಳಿತಿಕೊ ಚಹಾ ಕೊಡ್ತೀನಿ, ಏನಾಯ್ತು ಇವತ್ತು ಆಫೀಸ್ ನಲ್ಲಿ ಊಹುಂ... ಒಂದು ಮಾತಿಲ್ಲ, ಅವಳಾಯ್ತು ಅವಳ ಮೊಬೈಲ್ ಆಯ್ತು, ಮಕ್ಕಳು ಊಟ, ಟೈಮ್ ಮುಕ್ಕಿದರೆ ಟೀವಿ ಆನ್ ಮಾಡಿಕೊಂಡು ಕೋತುಬಿಡುತ್ತಾಳೆ.

ಒಮ್ಮೊಮ್ಮೆ ಒಂದು ಗ್ಲಾಸ್ ನೀರು ಕೊಡುವವರೂ ಇಲ್ಲದಾಗಿದೆ ಅನಿಸಿಬಿಡುತ್ತದೆ ಅಮ್ಮ ಮನೆಯಲ್ಲಿ, ನನಗೆ ಅನಿಸುತ್ತೆ ನಾನು ತಪ್ಪು ಮಾಡಿ ಬಿಟ್ಟೆ, ಇಷ್ಟು ಬೇಗನೆ ಮದುವೆ ಆಗಬಾರದಿತ್ತು ಅನಿಸುತಿದೆ ನೋಡಮ್ಮ. ಏನಂದ್ರು ಅಮ್ಮಾ ನಿಮ್ಮ ತರಹ ಜೀವನ ಮಾಡ್ಲಿಕ್ಕೆ ಆಗೊದಿಲ್ಲ ಅಮ್ಮಾ ನಮಗೆ, ಅದು ಹೇಗಮ್ಮ ನೀನು ಅಪ್ಪಾ ಇಷ್ಟೊಂದು ಅನ್ಯೋನ್ಯವಾಗಿ ಇದ್ದೀರಿ, ಏನಮ್ಮಾ ನೀನು ಅಪ್ಪಾ ಯಾವತ್ತೂ ಜಗಳಾನೆ ಮಾಡಿಲ್ವ? ನಿಮ್ಮಿಬ್ಬರ ಮಧ್ಯ ಯಾವುತ್ತೂ ತಪ್ಪು ಗ್ರಹಿಕೆಗಳು ಬಂದೇ ಇಲ್ವಾ? ನಿನ್ನ ಮೇಲೆ ಅಪ್ಪಾ ಅವರ ಮೇಲೆ ನೀನು ಯಾವತ್ತೂ ಬೇಸರ ಮಾಡಿಕೊಂದಿದ್ದನ್ನು ನಾನು ನೋಡೆ ಇಲ್ವಲ್ಲಮ್ಮ, ಅದು ಹೇಗೆ ಸಾದ್ಯವಾತು ಅಮ್ಮಾ ನಿಮಗೆ ಇದು.

ಇಷ್ಟು ವರ್ಷವಾದರೂ ಒಂದು ದಿನವೂ ನೀವು ಬೇರೆ ಬೇರೆ ಆಗಿದ್ದು, ಜಗಳ ಮಾಡಿದ್ದು, ಸಿಟ್ಟಾಗಿ ಊಟಬಿಟ್ಟು ಬೇರೆ ಬೇರೆ ಕೋಣೆಯಲ್ಲಿ ಮಲಗಿದ್ದು ನಾನು ನೋಡಲೇ ಇಲ್ವಲ್ಲಮ್ಮ. ಒಟ್ಟಿಗೆ ಊಟ ಮಾಡ್ತೀರಿ, ಪ್ರತಿ ದಿನ ಅಪ್ಪ ಹೊರಗಡೆ ಹೊಗ್ತಾರೆ, ನೀನು ಮನೆಯಲ್ಲೇ ಇರುತ್ತೀಯಾ, ನಮ್ಮನ್ನೆಲ್ಲ ಸಾಕಿ ಸಲುಹಿ ಬೆಳೆಸಿದ್ದೀರಿ ಇಷ್ಟೆಲ್ಲಗಳ ಮಧ್ಯೆ ಹೇಗಮ್ಮ ಇದೆಲ್ಲ ನಿಮಗೆ ಸಾಧ್ಯವಾಯಿತು ಮತ್ತೆ ನಾವೇಕೆ ಹೀಗೆ..?

ಮಗನ ತಲೆಯನ್ನು ನೇವರಿಸುತ್ತಾ, ಅವನು ಹೇಳುವುದನ್ನೆಲ್ಲ ಹೇಳಿ ಬಿಡಲಿ ಎಂದು ಸುಮ್ಮನೆ ಕೇಳುತ್ತಿದ್ದಳು. ಏನಾದರೂ ಮಾತಾಡಮ್ಮಾ... ಎಂದ ಮಗನನ್ನ, ತನ್ನ ತೊಡೆಯ ಮೇಲಿಂದ ಎಬ್ಬಿಸಿ ಏನಾದರು ತಿನ್ನಲಿಕ್ಕೆ ತಂದು ಕೊಡಲಾ.. ಹಸಿವಾಗಿರಬೇಕು ನಿನಗೆ, ಯಾವಾಗ ಊಟ ಮಾಡಿದ್ದೆ? ಇರು ಬರ್ತೀನಿ ಎಂದು ಅಡುಗೆ ಮನೆಗೆ ಹೋದ ಅಮ್ಮಾ ತಟ್ಟೆಯಲ್ಲಿ ಒಂದಿಷ್ಟು ಸಂಕರ ಪುಳ್ಳಿ ಜೊತೆಗೆ ಒಂದು ಕಪ್ಪು ಬಿಸಿ ಬಿಸಿ ಚಹಾ ತಂದು ಕೊಟ್ಟಳು. ದೇಹ ಮನಸ್ಸು ಎರಡರಿಂದಲೂ ದಣಿದಿದ್ದ ಮಗ ಮರು ಮಾತಾನಾಡದೆ ಚಹಾ ಕುಡಿಯುತ್ತಾ ಅಮ್ಮನ ಮುಖವನ್ನು ಒಮ್ಮೆ ನೋಡಿದ, ತಕ್ಷಣ ಅವನ ಗಂಟಲು ಬಿಗಿಯಾಯಿತು, ಕೈ ನಡುಗಲಿಕ್ಕೆ ಪ್ರಾಂಭವಾಗಿ ಕಣ್ಣೀರು ಹಾಗೆ ಸುರಿಯಲಿಕ್ಕೆ ಪ್ರಾರಂಭಿಸಿತು ಮತ್ತೆ ಬಿಕ್ಕಿ ಬಿಕ್ಕಿ ಅಳಲು ಪ್ರಾರಂಭ ಮಾಡಿದ ಮಗನನ್ನು ನೋಡಿದ ಅಮ್ಮಾ ಹೇಳು ಇನ್ನೂ ಏನಾದರು ನಿನ್ನ ಮನಸ್ಸಿನಲ್ಲಿ ಇದ್ದರೆ ಹೇಳಿ ಬಿಡು, ಯಾವುದನ್ನೂ ಮನಸ್ಸಿನಲ್ಲಿ ಇಟ್ಟುಕೊಳ್ಳಬೇಡ ಅದು ಮನಸ್ಸಿನಲ್ಲಿ ಇದ್ದಷ್ಟೂ ಬಾರವಾಗುತ್ತಾ ಹೊಗುತ್ತದೆ.



ಜಿ ಶಿವಕುಮಾರ್ ಸೋಗಿ
ಲೇಖಕರು, ಕಾರವಾರ ಕೈಗಾ

Hampi Times E-paper
SCAN AND READ

ಅಮ್ಮನ ಮಾತು ಮುಗಿಯುವ ಮುನ್ನವೇ ಹೌದಮ್ಮ ಇದರಲ್ಲಿ ನನ್ನದೂ ತಪ್ಪಿದೆ, ಅವಳಾದರೂ ಏನು ಮಾಡುತ್ತಾಳೆ. ಮುಂಜಾನೆಯಿಂದಲೇ ಕಸ ಮುಸುರಿ, ಮಕ್ಕಳ ಯೂನಿಫಾರ್ಮ, ಶಾಲೆ ನನಗೆ ಊಟ ಬಟ್ಟೆ ತಿಂಡಿ ತಿನಿಸು ಇವುಗಳ ಮಧ್ಯೆನೇ ಅವಳು ಕಳೆದು ಹೋಗುತ್ತಾಳೆ. ನಾನಾದರೂ ಮನೆಯಿಂದ ಆಚೆ ಹೋಗಿ ಬರುತ್ತೇನೆ, ಪಾಪ ಅವಳು ವಾರ ಪೂರ್ತಿ ಇದೆಲ್ಲದರ ಮಧ್ಯೆ ನನ್ನ ವೀಕೆಂಡ್ ಗಾಗಿ ಕಾಯುತ್ತಿರುತ್ತಾಳೆ, ಆದರೆ ನಾನು ಆ ಒಂದು ದಿನವಾದರೂ ಮನೆಯಲ್ಲಿ ಅವಳೊಂದಿಗೆ ಅವಳ ಕೆಲಸಗಳಲ್ಲಿ ಸಹಕರಿಸುವುದಿಲ್ಲ, ಬದಲಾಗಿ ನನ್ನ ಆಫೀಸ್ ನ ಫೈಲ್ ಗಳನ್ನು ಅಂದೂ ಮನೆಗೆ ತಂದಿರುತ್ತೇನೆ. ಆ ಒಂದು ದಿನಕ್ಕಾದರು ಮಕ್ಕಳೊಂದಿಗೆ ಆಡುವುದಿಲ್ಲ, ಅವರ ಹೋಂ ವರ್ಕ್ ಗೆ ಸಹಕರಿಸುವುದಿಲ್ಲ, ಬದಲಾಗಿ ಆಗಾಗ ಚಹಾ ಕೊಡು, ಕಾಫಿ ಕೊಡು ಎಂದು ಅವಳಿಗೆ ಕಾಡುತ್ತಿರುತ್ತೇನೆ.

ಹೌದಮ್ಮ ನಾನು ವಾರದಲ್ಲಿ ಯಾವತ್ತು ಒಂದು ದಿನ, ಒಂದೊ



ಎರಡೊ ಸಣ್ಣ ಪುಟ್ಟ ಕೆಲಸ ಮಾಡಿಕೊಡುವುದರಿಂದ ಅವಳಿಗೆ ಸಹಾಯವಾಗಬಹುದು ಅಲ್ವೆ, ಮಕ್ಕಳ ಒಂದು ದಿನದ ಸಂಪೂರ್ಣ ಜವಾಬ್ದಾರಿಯನ್ನು ತೆಗೆದುಕೊಂಡರೆ ಅವಳಿಗೂ ಕೊಂಚ ಅನುಕೂಲವಾಗಬಹುದು, ಅವಳನ್ನೂ ವಾರಂತಕ್ಕೆ ಹೊರಗಡೆ ಎಲ್ಲಿಯಾದರೂ ಕರೆದುಕೊಂಡು ಹೊಗಬೇಕಲ್ವೆ. ಏನು ಮಾಡ್ಲಿ ಅಮ್ಮಾ ನಾನೇನು ಬೇಕಂತಲೆ ಇದನ್ನೆಲ್ಲ ಅವೈಡ್ ಮಾಡ್ತಿಲ್ಲ ಅಮ್ಮಾ ಅವಳ ನನ್ನ ಮತ್ತು ನಮ್ಮ ಮಗುವಿನ ಮುಂದಿನ ಭವಿಷ್ಯಕ್ಕಾಗಿ ಅಲ್ಲವೇ, ನಿಜ ಹೇಳ್ತೀನಿ ಅಮ್ಮಾ ನಾನು ಒಂದು ದಿನವೂ ಇತರರಂತೆ ಪಾರ್ಟಿ, ಪಬ್ಬು ಕ್ಲಬ್ ಗಳಂತ ಹೋಗುವುದಿಲ್ಲ, ಇತರರಂತೆ ಒಂದು ರೂಪಾಯಿಯನ್ನು ಅನವಶ್ಯಕವಾಗಿ ಖರ್ಚು ಮಾಡುವುದಿಲ್ಲ ವಾರದ ಏಳು ದಿನವೂ ಕತ್ತೆಯಂತೆ ದುಡಿಯುತ್ತೇನೆ ಗೊತ್ತಾ, ಆದರೂ ಅವಳು ನನ್ನನ್ನು ಸ್ವಲ್ಪವೂ ಅರ್ತಮಾಡಿಕೊಳ್ಳುವುದಿಲ್ಲ ಎಂದು ಗೊಣಗುತ್ತಿದ್ದನ್ನು ನೋಡಿದ ಅಮ್ಮಾ ಇದು ಸರಿಯಾದ ಸಮಯ ಅಂದುಕೊಂಡು, ಇನ್ನೇನಾದರೂ .... ಇದೆಯೇ ಹೇಳಿಕೊಳ್ಳಲು? ಅವನು ಅಮ್ಮನ ಮುಖವನ್ನು ನೋಡುತ್ತಿದ್ದ.

ಸರಿ ಹಾಗಾದರೆ ಕೇಳು, ನಿನ್ನೆ ನಿನ್ನ ಹೆಂಡತಿಯೂ ನೀನು ಆಫೀಸ್ ಗೆ ಹೋದ ನಂತರ ಇದೇ ರೀತಿಯಾಗಿ ಮೊದಲಾರ್ದದಲ್ಲಿ ನಿನ್ನ ಬಗ್ಗೆ ನಾನ ಬಗೆಯ ಆರೋಪಗಳನ್ನು ಮತ್ತು ಉತ್ತರಾರ್ದದಲ್ಲಿ ಅನುಕಂಪವನ್ನು ತೋರಿಸಿ ಏನು ಮಾಡುವುದು ಅವರಾದರು ವಾರಪೂರ್ತಿ ದಣಿವಿಲ್ಲದಂತೆ ದುಡಿಯುತ್ತಾರೆ ಅದೆಲ್ಲವೂ ಸರಿಯೇ, ಆದರೂ ನನ್ನ ಬಗ್ಗೆ ಅವರಿಗೆ ಸ್ವಲ್ಪವೂ ಕಾಳಜಿ ಇಲ್ಲ ಎಂದು ಹೊರಟು ಹೋದಳು ಎನ್ನುತ್ತಿದ್ದಂತೆ, ಹೌದೆ ಎನ್ನುವಂತೆ ಪಿಳಿ ಪಿಳಿ ಕಣ್ಣುಬಿಟ್ಟುಕೊಂಡು ನೋಡುತ್ತಿದ್ದಾಗ, ಅಮ್ಮಾ ಮುಂದುವರಿದು ನಿಮ್ಮಿಬ್ಬರಲ್ಲಿ ಸಾಕಷ್ಟು ಸಾಮ್ಯತೆ ಇದೆ ಆದರೂ ಕೆಲ ಹೊಂದಾಣಿಕೆಯ, ಅರ್ಥಮಾಡಿಕೊಳ್ಳುವಲ್ಲಿ ಎಡವುತ್ತಿದ್ದೀರಿ. ಈಗ ನೋಡು ನೀನು ವಾರದ ಒಂದೊ ಎರಡೊ ದಿನಗಳಲ್ಲಿ ಮನೆಯಲ್ಲಿ ಸಣ್ಣ ಪುಟ್ಟ ಕೆಲಸ ಮಾಡಿಕೊಡುವುದರಿಂದ ಅವಳಿಗೇನೂ ದೊಡ್ಡ ಮಟ್ಟದ ವ್ಯತ್ಯಾಸ ವಾಗುವುದಿಲ್ಲ, ಅದರಿಂದ ಅವಳಿಗೆ ಸಹಾಯವಾಯಿತು ಎಂದು ಅವಳ ಕೆಲಸದ ಬಾರವನ್ನು ಇಳಿಸಿದೆನೆಂದು ಅಂದುಕೊಳ್ಳುವುದರಲ್ಲಿ ಅರ್ಥವಿಲ್ಲ. ಗಮನವಿಟ್ಟು ಕೇಳು

ಭೂಮಿಯ ಮೇಲಿನ ಪ್ರತಿಯೊಂದು ಹೆಣ್ಣು ಸಹ ಗಂಡಿನ ಆಸರೆಯನ್ನು ಬಯಸುತ್ತಾಳೆ, ಅವನ ಸಾಮಿಪ್ಯವನ್ನು ಸಹವಾಸವನ್ನು ಯಾವತ್ತೂ ಬಯಸುತ್ತಾಳೆ. ನನ್ನ ಮಗ ನನ್ನ ಗಂಡ ಯಾವತ್ತೂ ನನಗೆ ಮಾತ್ರ ಸ್ವಂತ ನನಗೆ ಸೇರಿದವನೆಂದು ಬಯಸುತ್ತಾಳೆ, ಅದು ಅವಳ ಪ್ರಕೃತಿದತ್ತವಾದಂತಹ ಗುಣ. ಗಂಡ ತನ್ನ ಹೆಂಡತಿಗೆ ಮಾಡುವ ಚಿಕ್ಕಪುಟ್ಟ ಸಹಾಯಕಿಂತ ಆ ಸಹಾಯ ಮಾಡುವ ಸಂದರ್ಭದಲ್ಲಿ ಅವನ ಸಾಮಿಪ್ಯ, ಅವನ ಸಾಂಗತ್ಯ, ಅವನ ಸಾನಿಧ್ಯದಲ್ಲಿರುವಂತಹ ಆನಂದ ಅವಳಿಗೆ ಅತಿ ಹೆಚ್ಚು ಸಂತೋಷವನ್ನು ಉಂಟುಮಾಡುತ್ತದೆ. ಈ ರೀತಿಯಾಗಿ ಕೆಲಸ ಮಾಡುವಂತಹ ನೆಪದಲ್ಲಾದರೂ ತನ್ನ ಗಂಡನ ಸಾಮಿಪ್ಯವನ್ನು, ಸಾನಿಧ್ಯವನ್ನು ಸದಾಕಾಲ ಅನುಭವಿಸಲು ಆತುರ ಪಡುತ್ತಾಳೆ ಆಸೆ ಪಡುತ್ತಾಳೆ ಇದರಲ್ಲಿ ಯಾವ ತಪ್ಪು ಕಂಡುಬರುವುದಿಲ್ಲ ಇದು ಸಹಜವು ಕೂಡ ಹಾಗೆಯೇ ಇದೇ ಅವಳ ಪ್ರಕೃತಿ. ಹಾಗಂತ ಅವಳು ಒಂಟಿಯಾಗಿ ಬದುಕಲಾಗುವುದಿಲ್ಲ ಎಂದಲ್ಲ.

ನನ್ನ ಗಂಡ ನನ್ನ ಜೊತೆಯಲ್ಲೇ ಇರಲಿ, ಪ್ರತಿಯೊಂದು ವಿಚಾರದಲ್ಲಿಯೂ ಮನೆಯ ಒಳಗಿನ ಮತ್ತು ಮನೆಯ ಹೊರಗಿನ ಎಲ್ಲ ಜವಾಬ್ದಾರಿಗಳಲ್ಲಿ ತಾನು ಭಾಗವಹಿಸಬೇಕೆಂಬ ಹಂಬಲ ಅಷ್ಟೇ. ನೆನಪಿರಲಿ ಇಂದಿನ ಅನೇಕ ಸಂದರ್ಭಗಳಲ್ಲಿ, ಅನೇಕ ಜವಾಬ್ದಾರಿಗಳಲ್ಲಿ, ಅವಳು ತೆಗೆದುಕೊಳ್ಳುವಂತಹ ನಿರ್ಧಾರಗಳು ಅತ್ಯಂತ ಉತ್ಕೃಷ್ಟ ಮತ್ತು ಫಲಕಾರಿಗಳಾಗಿರುತ್ತವೆ. ಯಾವುದೇ ಒಂದು ವಿಚಾರದ ಕುರಿತು ಅವಳ ಸೂಕ್ಷ್ಮ ದೃಷ್ಟಿ, ಆಳವಾದಂತಹ ಜ್ಞಾನ, ಯೋಚಿಸುವಂತಹ ರೀತಿ, ಅವಳಗಿರುವಂತಹ ದೂರ ದೃಷ್ಟಿ, ತೆಗೆದುಕೊಳ್ಳುವಂತಹ ನಿರ್ಧಾರ ಸ್ಪಷ್ಟವಾಗಿರುತ್ತದೆ. ಇಲ್ಲಿ ಬಹು ಮುಖ್ಯವಾಗಿ ಅವಳ ಪಾಲ್ಗೊಳ್ಳುವಿಕೆಗೆ ಅವಕಾಶವೇ ಇಲ್ಲದಂತೆ ಮಾಡುವುದು ಅವಳನ್ನು ಚಿಂತೆಗೀಡು ಮಾಡುತ್ತದೆ. ಎಲ್ಲಿ ತನ್ನ ಅಭಿಪ್ರಾಯಕ್ಕೆ ಮನ್ನಣೆ ಇಲ್ಲ ಎಂದು ಗೊತ್ತಾಗುತ್ತದೆಯೋ ಅಲ್ಲಿ ಅವಳು ಕಿನ್ನಳಾಗುತ್ತಾಳೆ, ಎಲ್ಲವೂ ಇದ್ದು ಇಲ್ಲದಂತಹ ನಿರ್ವಾತವನ್ನ ಅನುಭವಿಸುತ್ತಾಳೆ, ಮನೆ ಮತ್ತು ಮನಸ್ಸಿನಿಂದ ದೂರವಾಗುತ್ತಾಳೆ.

ಮಗನ ಮುಖವನ್ನ ನೋಡುತ್ತಾ ತಾಯಿ ಹೇಳುತ್ತಾಳೆ, ಇಲ್ಲಿ ನೀನು ಮಾಡಬೇಕಾಗಿರುವುದು ಇಷ್ಟೇ ಅವಳ ಮಾತಿಗೆ ಕಿವಿಯಾಗು ಅವಳ ಅಭಿಪ್ರಾಯವನ್ನು ಗೌರವಿಸು, ಅವಳ ಜೊತೆಯಲ್ಲಿ ಕುಳಿತುಕೋ ಅವಳೊಂದಿಗೆ ಮುಕ್ತವಾಗಿ ಮಾತನಾಡು, ನಿನಗಿರುವಂತಹ ಸಮಸ್ಯೆ ಸವಾಲುಗಳನ್ನು ಅವಳೊಂದಿಗೆ ಹಂಚಿಕೋ ಹಾಗೆಯೇ ಅವಳಲ್ಲಿ ಇರಬಹುದಾದಂತಹ ಅವಳಿಗೆ ಉಂಟಾಗಬಹುದಾದಂತಹ ಸಮಸ್ಯೆಗಳನ್ನ ಸವಾಲುಗಳನ್ನ ಮನಸಾರೆ ಕೇಳು, ಇಬ್ಬರೂ ಕುಳಿತುಕೊಂಡು ನಿಮ್ಮ ನಿಮ್ಮ ಸಮಸ್ಯೆಗಳಿಗೆ ಪರಿಹಾರವನ್ನು ಕಂಡುಕೊಳ್ಳಿ ಮುಂದಿನ ಭವ್ಯ ಭವಿಷ್ಯಕ್ಕಾಗಿ ಯೋಜನೆಗಳನ್ನು ಸಿದ್ಧಪಡಿಸಿಕೊಳ್ಳಿ ಅದಕ್ಕೆ ಬೇಕಾದಂತಹ ಅಗತ್ಯ ತಯಾರಿಗಳನ್ನ ಈಗಿನಿಂದಲೇ ಸಿದ್ದಪಡಿಸಿಕೊಳ್ಳಿ. ಇಬ್ಬರೂ ನಿಮ್ಮ ಮನೆಗಾಗಿಯೇ ನಿಮ್ಮ ಏಳಿಗೆಗಾಗಿಯೇ ದುಡಿಯುತ್ತಿದ್ದೀರಿ ಆದರೆ ಒಬ್ಬರನ್ನೊಬ್ಬರು ಕೇಳಿಸಿಕೊಳ್ಳುತ್ತಿಲ್ಲ ಒಬ್ಬರಿಂದ ಇನ್ನೊಬ್ಬರು ಕಲಿಯುತ್ತಿಲ್ಲ ಒಬ್ಬರು ಇನ್ನೊಬ್ಬರಿಗೆ ಸಮಯವನ್ನು ನೀಡುತ್ತಿಲ್ಲ ಅತಿ ಮುಖ್ಯವಾಗಿ ಒಬ್ಬರಿಗೊಬ್ಬರು ಕುಳಿತುಕೊಂಡು ಮಾತನಾಡುತ್ತಿಲ್ಲ ಇದೇ ನಿಮ್ಮ ಸಮಸ್ಯೆಯ ಮೂಲ.

ಮಗನ ಮುಖ ಅರಳಿತು ಅದನ್ನ ಗುರುತಿಸಿದ ತಾಯಿ ಈಗ ಹೇಳುತ್ತೇನೆ ಕೇಳು. ಪ್ರಪಂಚದಲ್ಲಿ ಅತಿ ಹೆಚ್ಚು ಜಗಳ ಮಾಡುವವರು ನಾನು ಮತ್ತು ನಿಮ್ಮ ತಂದೆ ಅಂದರೂ ತಪ್ಪಿಲ್ಲ, ಆದರೂ ನಾವೆಂದು ಅದನ್ನ ತೋರಿಸಿಕೊಂಡಿಲ್ಲ ನಮ್ಮ ಜಗಳ ವಸ್ತುನಿಷ್ಠವಾಗಿರುತ್ತದೆ ವಿಚಾರನಿಷ್ಟವಾಗಿರುತ್ತದೆ ಅಷ್ಟೇ. ಮೇಲಾಗಿ ನಿಮ್ಮ ತಂದೆ ನನಗೆ ನಾನು ನಿಮ್ಮ ತಂದೆಗೆ ಹೆಚ್ಚು ಹೆಚ್ಚು ಸಮಯವನ್ನು ಕೊಡುತ್ತೇವೆ ಚರ್ಚಿಸುತ್ತೇವೆ ಪರಿಹಾರವನ್ನು ಕಂಡುಕೊಳ್ಳುತ್ತೇವೆ ಮತ್ತೆ ಮುನ್ನಡೆಯುತ್ತೇವೆ ಹೀಗೆ ಖುಷಿ ಖುಷಿಯಾಗಿರುತ್ತೇವೆ. ಈಗ ನಿನ್ನ ಸಮಸ್ಯೆ ಏನೆಂದು ನಿನಗೆ ತಿಳಿದಿರಬೇಕಲ್ಲವೇ ಅವಳಿಗೂ ಸಹ ನಾನು ನಿನ್ನೆ ಇದೇ ವಿಷಯವನ್ನೇ ಹೇಳಿದ್ದೇನೆ. ತಪ್ಪು ಇಬ್ಬರಲ್ಲಿಯೂ ಇಲ್ಲ ಹಾಗೆಯೇ ಇಬ್ಬರೂ ತಪ್ಪಿತಸ್ಥರೇ ಗೊತ್ತಾಯ್ತಲ್ಲ.

ಇಷ್ಟೆಲ್ಲಾ ಕೇಳಿದ ನಂತರವೂ ಅವಳೇಕೆ ಹೀಗೆ ಎಂದರೆ ....?

# ಭವಿಷ್ಯದಲ್ಲಿ ಮನುಷ್ಯನ ಖಾಸಗಿತನವೇ ಇರುವುದಿಲ್ಲ!

■ ಸಿದ್ಧರಾಮ ಕೂಡ್ಲಿಗಿ

ಎಷ್ಟೋ ಕಾಲ್ಪನಿಕ ವಿಷಯಗಳ ಬಗ್ಗೆ ನಾವು ಓದಿದಾಗ ಅಥವಾ ಕೇಳಿದಾಗ "ಇದೆಲ್ಲಾ ಸಾಧ್ಯವೇ? " ಎಂದು ತಲೆ ಕೆಡಿಸಿಕೊಳ್ಳದೇ ಅದನ್ನು ಅಲ್ಲಿಯೇ ಕೈಬಿಡುತ್ತೇವೆ. ಆದರೆ ಯಾವುದು ಅಸಾಧ್ಯವೋ ಅದನ್ನು ಸಾಧ್ಯ ಮಾಡುವಿಕೆಯ ಅಚ್ಚರಿಗಳು ವೈಜ್ಞಾನಿಕ ಸಂಶೋಧನೆಗಳಲ್ಲಿರುತ್ತವೆ.

ಈಗ ನೋಡಿ ಇತ್ತೀಚೆಗೆ "ಓಚಿಣಣಡಿಜ" ಪತ್ರಿಕೆಯಲ್ಲಿ ಒಂದು ಸಂಶೋಧನಾ ವರದಿ ಪ್ರಕಟವಾಗಿದೆ. ವಿಜ್ಞಾನಿಗಳು ಮನಸಿನ ಆಲೋಚನೆಗಳನ್ನು ಓದುವ ಂಖ ಆಧಾರಿತ ಪಠ್ಯ ಪರಿವರ್ತನಾ ಸಾಧನವೊಂದನ್ನು ರಚಿಸಿದ್ದಾರೆ. ಅದು ವ್ಯಕ್ತಿಯ ಮೆದುಳಿನ ಚಟುವಟಿಕೆಯನ್ನು ಪಠ್ಯವನ್ನಾಗಿ ಪರಿವರ್ತಿಸುವ ಸಾಮರ್ಥ್ಯವನ್ನು ಹೊಂದಿದೆ. ವಿಶೇಷವೇನೆಂದರೆ ಇದಕ್ಕೆ ಯಾವುದೇ ರೀತಿಯಲ್ಲಿ ಮೆದುಳಿನಲ್ಲಿ ಶಸ್ತ್ರಚಿಕಿತ್ಸೆ ನಡೆಸಿ ಚಿಪ್ ಗಳನ್ನು ಅಳವಡಿಸುವುದು ಬೇಕಿಲ್ಲ. ಇದು ಚಾಟ್ ಬಾಟ್ ಚಾಟ್ ಜಿಪಿಟಿಯಂತೆಯೇ ಂಖ ತಂತ್ರಜ್ಞಾನವನ್ನು ಬಳಸುತ್ತದೆ. ಅದು ಮೆದುಳಿನ ಚಟುವಟಿಕೆಯನ್ನು ಸ್ಕ್ಯಾನ್ ಮಾಡಿ ಅದನ್ನು ಊಹಿಸಿ ಅದರ ಪ್ರಕಾರ ಅದನ್ನು ಪಠ್ಯವನ್ನಾಗಿ ಪರಿವರ್ತಿಸಿ ಕೊಡುತ್ತದೆ.

ಹಾಗಾದರೆ ಇದನ್ನೇನಾದರೂ ಬಳಸಿ ಅಂಥ ಸಾಧನಗಳು ಮಾರುಕಟ್ಟೆಗೆ ಬಂದುಬಿಟ್ಟರೆ ಯಾರು ಯಾರ ಮನಸನ್ನು ಬೇಕಾದರೂ ಓದಬಹುದು ಎಂಬ ಗಾಬರಿಯೂ ಉಂಟಾಗಬಹುದು. ಅದಕ್ಕೆಂದೇ ಈ ಸಂಶೋಧನೆ ನಡೆಸಿರುವ ಅಲೆಕ್ಸಾಂಡರ್ ಹುತ್ ಎಂಬ ವಿಜ್ಞಾನಿ ಹೇಳುವುದೇನೆಂದರೆ 'ನಾವಿದನ್ನು ಮನಸಿನ ಓದುವಿಕೆ ಎಂದು ಕರೆಯಲು ಇಷ್ಟಪಡುವುದಿಲ್ಲ' ಎಂದಿದ್ದಾರೆ. ಯಾರು ಮತ್ತೊಬ್ಬರೊಂದಿಗೆಸಂವಹನಮಾಡಲುಅಸಹಾಯಕರಾಗಿರುವರೋ ಅಂಥವರಿಗೆ ಸಹಾಯ ಮಾಡುವ ಉದ್ದೇಶದ ಒಂದು ಅಪ್ಲಿಕೇಶನ್' ಎಂದಿದ್ದಾರೆ. (ಪರಮಾಣು ಬಾಂಬ್ ಸಂಶೋಧಿಸಿದಾಗಲೂ



ಮುಂದಿನ ಅನಾಹುತಗಳನ್ನು ಕಂಡುಹಿಡಿದ ವಿಜ್ಞಾನಿ ಊಹಿಸಿರಲಿಲ್ಲ) ಮೊಬೈಲ್ ಗಳೇ ಒಂದು ಅದ್ಭುತ ಅಂಥದ್ದರಲ್ಲಿ ಈಗ ಮೊಬೈಲ್ ಗಳಲ್ಲಿಯೇ ಎಷ್ಟೊಂದು ತಂತ್ರಜ್ಞಾನ ಅಡಗಿದೆ. ಈಗ ಮಾರುಕಟ್ಟೆಯ ತುಂಬಾ ಅತ್ಯಾಧುನಿಕ ಮೊಬೈಲ್ ಗಳೇ. ಅದೇ ರೀತಿಯಲ್ಲಿ ಈ ತಂತ್ರಜ್ಞಾನವೂ ಅಭಿವೃದ್ಧಿ ಹೊಂದಿ ಮಾರುಕಟ್ಟೆಯಲ್ಲಿ ಕೈಗೊಂದು ಕಾಲಿಗೊಂದು ಎಂಬಂತೆ ಇಂಥ ಅಪ್ಲಿಕೇಶನ್ ಇರುವ ಸಾಧನಗಳೇನಾದರೂ ಜನರಿಗೆ ದೊರೆತುಬಿಟ್ಟರೆ ಜನರ ಅಂತಿಮ ಖಾಸಗಿತನಕ್ಕೂ ಅಪಾಯವನ್ನುಂಟುಮಾಡಿದರೆ ಮುಂದೇನು ಗತಿ ? ಎಂಬ ಭೀತಿಯೂ ಉಂಟಾಗಬಹುದು. ಅದಕ್ಕೆಂದೇ ನೇಚರ್ ಪತ್ರಿಕೆಯ ಪ್ರಮುಖ ಲೇಖಕ ಜೆರ್ರಿ ಟ್ಯಾಂಗ್ ಹೇಳಿದ್ದು "ಪ್ರತಿಯೊಬ್ಬರ ಮೆದುಳಿನ ಮಾಹಿತಿ ಖಾಸಗಿಯಾಗಿರಬೇಕು. ಯಾಕೆಂದರೆ ನಮ್ಮ ಮೆದುಳೇ ನಮ್ಮ ಗೌಪ್ಯತೆಯ ಅಂತಿಮ ಗಡಿಯಾಗಿದೆ " ಎಂದಿದ್ದಾರೆ. ಯಾಕೆಂದರೆ ಆ ಗೌಪ್ಯತೆಯೂ ಒಂದು ವೇಳೆ ಸಿಗುವಂತಾಗಿಬಿಟ್ಟರೆ ಏನೇನು ಅನಾಹುತಗಳು ನಡೆಯಬಹುದೆಂದು ಊಹಿಸಿ.

ಆದರೆ ಯಾವುದೆ ತಂತ್ರಜ್ಞಾನವೂ ಒಳ್ಳೆಯದಕ್ಕೆ ಉಪಯೋಗವಾದರೆ ತೊಂದರೆಯಿಲ್ಲ. ಆದರೆ ದುರುಪಯೋಗ ಆದಾಗಲೇ ಅನಾಹುತಗಳು ಆರಂಭಗೊಳ್ಳೋದು. ಮೊಬೈಲ್ ನಲ್ಲಿರುವ ಕೆಮರಾದಿಂದ ಒಳ್ಳೆಯ ಫೋಟೊ, ವಿಡಿಯೋ ಮಾಡಬಹುದು. ಆದರೆ ಅದರ ದುರುಪಯೋಗ ಏನೆಂಬುದು ಈಗಾಗಲೇ ಒಂದು ಪ್ರಮುಖ ಅಪರಾಧದಲ್ಲಿ ಏನಾಗುತ್ತಿದೆ ಎಂಬುದು ನಿಮಗೆಲ್ಲ ಗೊತ್ತು.

ಈ ತಂತ್ರಜ್ಞಾನ ಬಂದರೆ ಅಪರಾಧಿಗಳ ಮನಸಿನಲ್ಲಿ ಏನಿದೆ ಎಂಬ ಸತ್ಯವನ್ನು ಪೊಲೀಸ್ ರು ಸುಲಭವಾಗಿ ಪತ್ತೆ ಹಚ್ಚಬಹುದು. ನ್ಯಾಯಾಲಯದ ಕಟಕಟೆಯಲ್ಲಿ ನಿಂತ ವ್ಯಕ್ತಿ ಸತ್ಯ ಹೇಳುತ್ತಿದ್ದಾನೋ, ಸುಳ್ಳು ಹೇಳುತ್ತಿದ್ದಾನೋ ಎಂಬುದನ್ನು, ವಕೀಲರ ತಲೆಯಲ್ಲಿ ಏನೇನು ನಡೆಯುತ್ತಿದೆ ಎಂಬುದನ್ನೂ ನ್ಯಾಯಾಧೀಶರು ಸುಲಭವಾಗಿ ಓದಬಹುದು. ನಾವು ನಮ್ಮ ಆಧಾರ ಕಾರ್ಡ್, ಚುನಾವಣಾ ಕಾರ್ಡ್, ಬ್ಯಾಂಕ್ ಅಕೌಂಟ್ ಸಂಖ್ಯೆಗಳನ್ನು ನೆನಪಿಟ್ಟುಕೊಂಡರೆ ಸಾಕು ಅದಕ್ಕೆ ಕಾರ್ಡ್ ನ್ನೇ ಒಯ್ಯಬೇಕೆಂದಿಲ್ಲ. ಒಂದು ರೀತಿಯಲ್ಲಿ ಇವೆಲ್ಲ ಒಳ್ಳೆಯದೇ ಅನಿಸಬಹುದು.

ಆದರೆ ದುರುಪಯೋಗದ ಬಗ್ಗೆ ಯೋಚಿಸಿದಾಗ ? ಗಂಡ ಹೆಂಡತಿ ಒಬ್ಬರಿಗೊಬ್ಬರು ಗೊತ್ತಿಲ್ಲದಂತೆ ಈ ಅಪ್ಲಿಕೇಶನ್ ಬಳಸಿದರೆ ? ಸ್ನೇಹಿತರು ಬಳಸಿದರೆ ? ಶಿಕ್ಷಕರು ವಿದ್ಯಾರ್ಥಿಗಳು ಬಳಸಿದರೆ ? ಅಧಿಕಾರಿಗಳು, ಸಿಬ್ಬಂದಿಯವರು ಬಳಸಿದರೆ ? ಮಾರಾಟಗಾರರು ಗ್ರಾಹಕರು ಬಳಸಿದರೆ ? ಏನೆಲ್ಲ ಅನಾಹುತಗಳು ನಡೆಯಬಹುದು ? ಏನೇ ಇರಲಿ ಮನುಷ್ಯನ ಮೆದುಳಿಗೂ ಕೈ ಹಾಕುವ ತಂತ್ರಜ್ಞಾನವೇನಾದರೂ ಸುಲಭವಾಗಿ ಜನರ ಕೈಗೆಟುಕಿಬಿಟ್ಟರೆ ಇನ್ನು ಅಳಿದುಳಿದ ಗೌಪ್ಯತೆಯನ್ನೂ ಶೇ.100ರಷ್ಟು ಕಳೆದುಕೊಳ್ಳುತ್ತೇವೆ.

# ಹಂಪಿ ಟೈಮ್ಸ್

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

HAMPI TIMES

ಕನ್ನಡ ದಿನಪತ್ರಿಕೆ
KANNADA DAILY



ಇಂದು ಹಾಗೂ ಹಿಂದಿನ ಹಂಪಿ ಟೈಮ್ಸ್ ಕಲರ್‌ಫುಲ್ ಇ-ದಿನಪತ್ರಿಕೆ ಓದಲು QR ಕೋಡ್ ಸ್ಕ್ಯಾನ್ ಮಾಡಿ ಓದಿರಿ



No.1 Leading in Local News Paper
70,000
HAMPI TIMES E-PAPER READERS
94486 33038 | NEWS PAPER ADD - THE BEST ADVERTISING PLATFORM TO BOOST YOUR BUSINESS
E-mail: hampitimes@gmail.com | # Valmiki Circle hospet-583201



ಸಂಪುಟ:01 • ಸಂಚಿಕೆ:342 • ನೋಂದಣಿ ನಂ.:KARKAN27911 • ವಿಜಯನಗರ • 16.06.2024 • ಭಾನುವಾರ • ಪುಟ:04 • ಬೆಲೆ:2
Volume:01 • Issue:342 • Reg.No:KARKAN27911 • VIJAYANAGARA • 16.06.2024 • Sunday • Page:04 • Rs:2





**Shanbhag Towers International (P) LTD**
Shanbhag Circle, College Road, Hosapete-583201, Vijayanagara Dist.
Ph: 08394-225910 to 225914, M:8073847150, 9686603752, 9880419702 Email:shanbhagtowers@gmail.com

Shanbhag Towers International is a budget friendly hotel welcoming all travellers looking for a budget stay in a palace like structure. Our hotel interiors have been designed delicately with white marble featuring marvellous white stone carvings and statues imposing an air of peace and nobility. We are located in the heart of the city. The Railway station is merely 1.5 kms away and the KKRSTC Bus stand is within 500 Metres.

Internet/Wi-Fi | On Premise Parking | 24-hour front desk service | Bar | Restaurant | Breakfast | Laundry | Meeting/Banquet Facilities | ATM On Site | 24 Hours Power Backup | Elevator | Airport transfer | Rental car | Tour

Call Now 9482147421





S.M.TRADERS & SERVICES
ATLAS COPCO
COMPRESSORS, HOSEPIPE, DRILL RODS, SPARE PARTS Etc.
Contact for Details
96866 63125
96866 63132
96864 13132
Hampi Road, Hosapete-583201


ಮೈಮೇಲೆ ಹರಿದ ಬಟ್ಟೆ ಇದ್ದರೂ ಚಿಂತೆಯಿಲ್ಲ. ಕೈಯಲ್ಲೊಂದು ಕನ್ನಡ ಪತ್ರಿಕೆ ಇರಲಿ.
ಡಿ.ವಿ.ಜಿ.

# ಭಾಷೆಯ ಅನಿವಾರ್ಯತೆ ಸೃಷ್ಟಿಸದ ಹೊರತು ಮಾತೃಭಾಷೆ ಕನ್ನಡ ಅನುಷ್ಠಾನ ಅಸಾಧ್ಯ

## ಸರ್ಕಾರಿ ನೌಕರರ ಸಂಘದ ತಾಲೂಕು ಅಧ್ಯಕ್ಷ ಪಿ.ಶಿವರಾಜ್ ಕಳವಳ | ಕನ್ನಡ ಸಾಹಿತ್ಯ ಪರಿಷತ್ತು ಕೂಡ್ಲಿಗಿ ಘಟಕದಿಂದ ಮುಂಗಾರು ಸಂಭ್ರಮಕ್ಕೆ ಚಾಲನೆ

**ಹಂಪಿ ಟೈಮ್ಸ್ ಕೂಡ್ಲಿಗಿ**

ಕನ್ನಡಿಗರ ಇಚ್ಛಾಶಕ್ತಿಯ ಕೊರತೆಯಿಂದಾಗಿ ಅನ್ಯ ಭಾಷೆಯ ಪ್ರಭಾವಕ್ಕೆ ಒಳಗಾಗುತ್ತಿರುವುದು ದುರಂತ ಎಂದು ಸರ್ಕಾರಿ ನೌಕರರ ಸಂಘದ ತಾಲೂಕು ಅಧ್ಯಕ್ಷ ಪಿ.ಶಿವರಾಜ್ ಕಳವಳ ವ್ಯಕ್ತಪಡಿಸಿದರು.

ತಾಲೂಕಿನ ಜಂಗಮ ಸೋವೆಹಳ್ಳಿ ಗ್ರಾಮದಲ್ಲಿ ಶನಿವಾರ ಕನ್ನಡ ಸಾಹಿತ್ಯ ಪರಿಷತ್ತು ತಾಲೂಕು ಘಟಕ ಏರ್ಪಡಿಸಿದ್ದ ಮುಂಗಾರು ಸಂಭ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು. ಭಾಷೆಯ ಅನಿವಾರ್ಯತೆ ಸೃಷ್ಟಿಸದ ಹೊರತು ಭಾಷೆಯ ಅನುಷ್ಠಾನ ಅಸಾಧ್ಯ. ನಾವು ನಿತ್ಯ ಭಾಷೆಯನ್ನು ಬೆಳೆಸ ಬೇಕಾದರೆ ಕನ್ನಡ ಭಾಷೆಯನ್ನೇ ಬಳಸಬೇಕು, ಆಗ ಭಾಷೆ ಸಮೃದ್ಧವಾಗಿ ಬೆಳೆಯುತ್ತದೆ, ಭಾಷಿಕರ ಸಂಖ್ಯೆಯೂ ಹೆಚ್ಚುತ್ತದೆ. ವಿದ್ಯಾವಂತರು ಹಣವಂತರು ದೊಡ್ಡ ಹುದ್ದೆಯಲ್ಲಿರುವವರು ಕನ್ನಡದ ಬಗ್ಗೆ ಇರುವ ಕೀಳರಿಮೆ ಯನ್ನು ಮೊದಲು ತೊರೆಯಬೇಕು ಎಂದರು. ಕನ್ನಡ ನೆಲದ ಸಕಲ ಸವಲತ್ತುಗಳು ಬೇಕು, ಕನ್ನಡ ಭಾಷೆ ಬೇಡ ಎನ್ನುವವರಿಗೆ ಸರ್ಕಾರ ಬುದ್ಧಿ ಕಲಿಸಬೇಕಿದೆ ಎಂದರು.

ಕಸಾಪ ನಿಕಟ ಪೂರ್ವ ಅಧ್ಯಕ್ಷ ಎನ್.ಎಂ.ರವಿಕುಮಾರ್ ರೈತರು ರಸಗೊಬ್ಬರ ಬಳಸಿದರೆ ಆಗುವ ಪರಿಣಾಮಗಳ ಕುರಿತು ಮಾತನಾಡಿ, ಪ್ರಸ್ತುತ ದಿನಗಳಲ್ಲಿ ರೈತರು ದಿಢೀರ್ ಶ್ರೀಮಂತರಾಗುವ ಆಸೆಯಿಂದ ಕೊಟ್ಟಿಗೆ ಗೊಬ್ಬರ ಬಳಸದೇ ರಾಸಾಯನಿಕ ಯುಕ್ತ ಗೊಬ್ಬರ, ಔಷಧಗಳ ಬಳಕೆ ಮಾಡಿ ಈ ನೆಲದ ಸತ್ವವನ್ನು ವಿಷಮಾಡಿದ್ದಾರೆ.




ಯಥೇಚ್ಛವಾಗಿ ರಸಾಯನಿಕ ಗೊಬ್ಬರದ ಪರಿಣಾಮ ರೈತ ಬೆಳೆದ ಬೆಳೆ ವಿಷಮಯವಾಗಿದೆ ಇದನ್ನು ಸೇವಿಸುವ ನಾವುಗಳು ಅನೇಕ ರೋಗಗಳಿಗೆ ಬಲಿಯಾಗುವುದಲ್ಲದೆ, ಆಯಸ್ಸನ್ನು ಸಹ ಹತ್ತಿರಕ್ಕೆ ತಂದುಕೊಂಡಿದ್ದೇವೆ. ಹದಿ ಹರೆಯದ ವಯಸ್ಸಿನಲ್ಲಿಯೇ ಆಸ್ಪತ್ರೆಗೆ ದಾಖಲಾಗಿ ಹಣವ್ಯಯ ಮಾಡುತ್ತಿರುವುದು ದುರಂತವೇ ಸರಿ. ಆದ್ದರಿಂದ ರೈತರು ಸಾವಯವ ಗೊಬ್ಬರ ಬಳಸುವ ಜತೆ ಸಿರಿಧಾನ್ಯಗಳನ್ನು ಬೆಳೆದರೆ ಉತ್ತಮ ಆರೋಗ್ಯದ ಜತೆ ನೆಮ್ಮದಿಯ ಬದುಕನ್ನು ಕಟ್ಟಿಕೊಳ್ಳಬಹುದು ಎಂದು ರೈತರಿಗೆ ಸಲಹೆ ನೀಡಿದರು. ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಬಿ.ಬಿ.ಶಿವಾನಂದ ಒತ್ತಡ ಮುಕ್ತ ಕಲಿಕೆಯಲ್ಲಿ ಶಿಕ್ಷಕರ ಪಾತ್ರ ಕುರಿತು ಮಾತನಾಡಿದರು.

ಮಿಮಿಕ್ರಿ ಕಲಾವಿದ ಕೋಗಳಿ ಕೊಟ್ರೇಶ್ ಹಾಸ್ಯ ಕಲೆಯನ್ನು ಪ್ರಸ್ತುತ ಪಡಿಸಿ ಜನರನ್ನು ರಂಜಿಸಿದರು. ಕಾರ್ಯಕ್ರಮದಲ್ಲಿ ಸಾನಿಧ್ಯವನ್ನು ಕೂಡ್ಲಿಗಿ ಹಿರೇಮಠದ ಪ್ರಶಾಂತ ಸಾಗರ ಶಿವಾಚಾರ್ಯ ಸ್ವಾಮಿ ವಹಿಸಿದ್ದರು. ಕಸಾಪ ತಾಲೂಕು ಅಧ್ಯಕ್ಷ ವೀರೇಶ್ ಅಂಗಡಿ, ಕಜಾಪ ತಾಲೂಕು ಅಧ್ಯಕ್ಷ ಕೆ.ಎಂ.ವೀರೇಶ್,ಪ್ರೌಢಶಾಲಾ ಸಹ ಶಿಕ್ಷಕರ ಸಂಘದ ತಾಲೂಕು ಅಧ್ಯಕ್ಷ ಎಸ್.ವಿ.ಸಿದ್ದರಾಧ್ಯ, ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಜಿಲ್ಲಾ ಉಪಾಧ್ಯಕ್ಷೆ ವಿ.ಗೀತಾ, ತಾಲೂಕು ಅಧ್ಯಕ್ಷ ಕೊಟ್ರಗೌಡ, ಕಾರ್ಯದರ್ಶಿ ಟಿ.ಎಚ್.ಎಂ.ಶೇಖರಯ್ಯ, ಗ್ರಾಪಂ ಸದಸ್ಯ ಉಪ್ಪಾರ ಫಕ್ಕಿರಪ್ಪ,ಎಸ್ಡಿಎಂಸಿ ಅಧ್ಯಕ್ಷ ಉಪ್ಪಾರ ದುರುಗಪ್ಪ, ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಮುಖ್ಯ ಶಿಕ್ಷಕ ಮಂಜುನಾಥ, ಹಾಲಸ್ವಾಮಿ,ಹವ್ಯಾಸಿ ಬರಹಗಾರ ಸ್ವರೂಪನಂದ, ನಂದಿ ವಿರೂಪಾಕ್ಷಪ್ಪ ಸೇರಿದಂತೆ ಗ್ರಾಮಸ್ಥರು ಇದ್ದರು. ಕ.ಸಾ.ಪ. ಕಾರ್ಯದರ್ಶಿ ನಂದಿ ಬಸವರಾಜ ಸರ್ಕಾರಿ ಪ್ರಾಥಮಿಕ ಶಾಲೆಯ ವಿಧ್ಯಾರ್ಥಿಗಳಿಗೆ ಉಚಿತ ನೋಟ್ ಬುಕ್ಸ್ ವಿತರಿಸಿದರು. ಸಾಧಕರಿಗೆ ಸನ್ಮಾನ ಮಾಡಲಾಯಿತು. ಅಗಸಗಟ್ಟೆ ತಿಂದಪ್ಪ ಸಂಗಡಿಗರು ಜಾನಪದ ಗೀತೆಗಾಯನ ಮಾಡಿದರು.

> ವಿದ್ಯಾವಂತರು ಹಣವಂತರು ದೊಡ್ಡ ಹುದ್ದೆಯಲ್ಲಿರುವವರು ಕನ್ನಡದ ಬಗ್ಗೆ ಇರುವ ಕೀಳರಿಮೆ ಯನ್ನು ಮೊದಲು ತೊರೆಯಬೇಕು. ಕನ್ನಡ ನೆಲದ ಸಕಲ ಸವಲತ್ತುಗಳು ಬೇಕು, ಕನ್ನಡ ಭಾಷೆ ಬೇಡ ಎನ್ನುವವರಿಗೆ ಸರ್ಕಾರ ಬುದ್ಧಿ ಕಲಿಸಬೇಕಿದೆ.
>
> – ಪಿ.ಶಿವರಾಜ್, ತಾಲೂಕಧ್ಯಕ್ಷ ಸರ್ಕಾರಿ ನೌಕರರಸಂಘ,ಕೂಡ್ಲಿಗಿ

**ಮೈಕ್ರೋ ನ್ಯೂಸ್**

## ಟಿಬಿಡ್ಯಾಂ ಟು ಹಂಪಿ ಸಾರಿಗೆ ಸೌಲಭ್ಯ : ವೇಳಾಪಟ್ಟಿ ಬಿಡುಗಡೆ

**ಹಂಪಿ ಟೈಮ್ಸ್ ಹೊಸಪೇಟೆ**

ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮ ಹೊಸಪೇಟೆ ಘಟಕದಿಂದ ಸಾರ್ವಜನಿಕರ ಅನುಕೂಲಕ್ಕಾಗಿ ಜೂ.18ರಿಂದ ಟಿ.ಬಿ.ಡ್ಯಾಮ್‌ನಿಂದ ಹಂಪಿ ಸಂಪರ್ಕಿಸಲು ಅನುಸೂಚಿ ಸಂ: 301/1ರಲ್ಲಿ ಹೊಸಪೇಟೆ ಕೇಂದ್ರ ಬಸ್ ನಿಲ್ದಾಣದಿಂದ ನಗರ ಸಾರಿಗೆ ವ್ಯವಸ್ಥೆಯನ್ನು ಪ್ರಾರಂಭಿಸಲಾಗುತ್ತಿದ್ದು, ವಾಹನ ಬಿಡುವ ಮತ್ತು ತಲುಪುವ ಸಮಯವನ್ನು ಬಿಡುಗಡೆಮಾಡಲಾಗಿದೆ.

**ಹಂಪಿ ಟು ಟಿಬಿಡ್ಯಾಂ:**
ಬೆಳಿಗ್ಗೆ 7.45ಕ್ಕೆ ಹೊರಟು 8.40ಕ್ಕೆ ಟಿ.ಬಿ.ಡ್ಯಾಮ್ ತಲುಪುತ್ತದೆ. ನಂತರ 11.45ಕ್ಕೆ ಹೊರಟು 12.40ಕ್ಕೆ ತಲುಪುತ್ತದೆ. ನಂತರ 3.45ಕ್ಕೆ ಹೊರಟು ಸಂಜೆ 4.40ಕ್ಕೆ ಟಿ.ಬಿ.ಡ್ಯಾಮ್ ತಲುಪುತ್ತದೆ.

**ಟಿಬಿಡ್ಯಾಂ ಟು ಹಂಪಿ:**
ಟಿ.ಬಿ.ಡ್ಯಾಮ್‌ನಿಂದ ಬೆಳಿಗ್ಗೆ 8.55ಕ್ಕೆ ಹೊರಟು ಬೆಳಿಗ್ಗೆ 10 ಗಂಟೆಗೆ ಹಂಪಿಗೆ ತಲುಪುತ್ತದೆ, ಮದ್ಯಾಹ್ನ 12.55ಕ್ಕೆ ಹೊರಟು 1.50ಕ್ಕೆ ತಲುಪುತ್ತದೆ. ಸಂಜೆ 4.55ಕ್ಕೆ ಹೊರಟು 5.50ಕ್ಕೆ ಹಂಪಿಗೆ ತಲುಪುತ್ತದೆ. ಸಾರ್ವಜನಿಕರು ಈ ಸಾರಿಗೆ ಸೌಕರ್ಯದ ಸದುಪಯೋಗ ಪಡೆದುಕೊಳ್ಳಬೇಕೆಂದು ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮ ಹೊಸಪೇಟೆ ವಿಭಾಗದ ವಿಭಾಗೀಯ ನಿಯಂತ್ರಣಾಧಿಕಾರಿ ತಿಳಿಸಿದ್ದಾರೆ.

## ಕಲಾವಿದರಿಗೆ ಗುರುತಿನ ಚೀಟಿಗೆ ನೋಂದಣಿ ಪ್ರಾರಂಭ

**ಹಂಪಿ ಟೈಮ್ಸ್ ಹೊಸಪೇಟೆ**

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ವಿಜಯನಗರ ಜಿಲ್ಲೆಯ ಎಲ್ಲಾ ಅರ್ಹ ಕಲಾವಿದರುಗಳಿಗೆ ಗುರುತಿನ ಚೀಟಿಯನ್ನು ನೀಡಲು ಹಾಗೂ ಜಿಲ್ಲೆಯ ನೈಜ ಕಲಾವಿದರುಗಳ ಪಟ್ಟಿಯನ್ನು ತಯಾರಿಸಲು ಜಿಲ್ಲೆಯ ಎಲ್ಲಾ ಕಲಾವಿದರ ನೋಂದಣಿ ಪ್ರಾಂಭಿಸಲಾಗಿದೆ.

ಜಿಲ್ಲೆಯ ಕಲಾವಿದರುಗಳು ತಮ್ಮ ಹಾಗೂ ತಮ್ಮ ತಂಡದ ಸಹ ಕಲಾವಿದರುಗಳ ದಾಖಲೆಗಳ ಸಮೇತ ಮಾಹಿತಿಯನ್ನು ನಿಗದಿತ ಅರ್ಜಿ ನಮೂನೆಯಲ್ಲಿ ಭರ್ತಿಮಾಡಿ ಜೂನ್ 24ರೊಳಗಾಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವಿಜಯನಗರ ಕಚೇರಿಗೆ ಕಡ್ಡಾಯವಾಗಿ ಸಲ್ಲಿಸಿ ನೋಂದಣಿಯನ್ನು ಮಾಡಿಕೊಳ್ಳಲು ವಿಜಯನಗರ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಕರು ತಿಳಿಸಿದ್ದಾರೆ. ನಿಗದಿತ ಅರ್ಜಿ ನಮೂನೆಯ ಮಾದರಿಯು ಇಲಾಖೆಯಲ್ಲಿ ದೊರೆಯುತ್ತದೆ ಎಂದು ತಿಳಿಸಿದ್ದಾರೆ.

### ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಅಧಿಕಾರಿಗಳೊಂದಿಗೆ ಜೂ.21 ರಂದು ಕೆಡಿಪಿ ಸಭೆ

# ಕಾರ್ಯಗಳಿಗೆ ವೇಗ ಸಿಗಲಿದೆ ನಿರ್ಲಕ್ಷ್ಯಿಸಿದರೆ ಶಿಸ್ತುಕ್ರಮ ಗ್ಯಾರಂಟಿ

## ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ ಅಧಿಕಾರಿಗಳಿಗೆ ಖಡಕ್ ಸೂಚನೆ

**ಹಂಪಿ ಟೈಮ್ಸ್ ಹೊಸಪೇಟೆ**

ಜೂನ್ ಮಾಹೆಯಲ್ಲಿ ಮಾನ್ಯ ಮುಖ್ಯಮಂತ್ರಿಗಳು ವಿಜಯನಗರ ಜಿಲ್ಲೆಗೆ ಭೇಟಿ ನೀಡಿ ತ್ರೈಮಾಸಿಕ ಕೆಡಿಪಿ ಸಭೆ ನಡೆಸುವುದರಿಂದ ಅಗತ್ಯ ಸಿದ್ಧತೆ ಕೈಗೊಳ್ಳಬೇಕು ಎಂದು ಜಿಲ್ಲಾಧಿಕಾರಿಗಳಾದ ಎಂ.ಎಸ್.ದಿವಾಕರ ಅವರು ವಿವಿಧ ಇಲಾಖೆಯ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಜಿಲ್ಲಾಡಳಿ ಭವನದಲ್ಲಿ ಶುಕ್ರವಾರ ವಿವಿಧ ಇಲಾಖೆಯ ಜಿಲ್ಲಾಮಟ್ಟದ ಅಧಿಕಾರಿಗಳೊಂದಿಗೆ ಸಭೆ ನಡೆಸಿ ಮಾತನಾಡಿದರು. ಮುಖ್ಯಮಂತ್ರಿಗಳು ಜಿಲ್ಲಾಮಟ್ಟದ ಕೆಡಿಪಿ ಸಭೆಯಲ್ಲಿ ಭಾಗಿಯಾಗಿ ಅಧಿಕಾರಿಗಳೊಂದಿಗೆ ಸಭೆ ನಡೆಸಿ ವಿವಿಧ ಇಲಾಖೆಗಳ ಪ್ರಗತಿ ಪರಿಶೀಲನೆ ನಡೆಸುತ್ತಿರುವ ಗಂಭೀರತೆಯನ್ನು ಅಧಿಕಾರಿಗಳು ಅರಿಯಬೇಕು. ವಿಜಯನಗರ ಜಿಲ್ಲೆ ನೂತನವಾಗಿ ರಚನೆಯಾಗಿ ಕೆಲವೇ ವರ್ಷಗಳು ಗತಿಸಿದ್ದು, ಜಿಲ್ಲೆಯ ಪ್ರಗತಿಗೆ ವೇಗ ಕೊಡಬೇಕು ಎಂದು ಉದ್ದೇಶಿಸಿ ಜಿಲ್ಲಾ ಉಸ್ತುವಾರಿ ಸಚಿವರ ಮನವಿ ಮೇರೆಗೆ ವಿಜಯನಗರ ಜಿಲ್ಲೆಯ ಜಿಲ್ಲಾಮಟ್ಟದ ಅಧಿಕಾರಿಗಳೊಂದಿಗೆ ಪ್ರಗತಿ ಪರಿಶೀಲನಾ ಸಭೆ ನಡೆಸಲಿದ್ದಾರೆ.



ವಿಜಯನಗರ ಜಿಲ್ಲೆಯಾದ ಬಳಿಕ ಮುಖ್ಯಮಂತ್ರಿಗಳು ಜಿಲ್ಲಾಮಟ್ಟದ ಅಧಿಕಾರಿಗಳೊಂದಿಗೆ ಸಭೆ ನಡೆಸುತ್ತಿರುವುದು ವಿಜಯನಗರ ಜಿಲ್ಲೆಯ ಪ್ರಗತಿಯ ಇತಿಹಾಸದಲ್ಲಿ ಹೊಸ ಮೈಲುಗಲ್ಲಾಗಲಿದೆ. ನೂತನ ವಿಜಯನಗರ ಜಿಲ್ಲೆಯ ಪ್ರಗತಿಯ ವೇಗಕ್ಕೆ ಸಿಎಂ ನಡೆಸುವ ಸಭೆಯು ಹೊಸ ಮುನ್ನುಡಿ ಬರೆಯಲಿದೆ. ಈ ಸಭೆಯಿಂದಾಗಿ ಪ್ರಗತಿಯ ಕಾರ್ಯಗಳಿಗೆ ವೇಗ ಸಿಗಲಿದೆ. ಪ್ರತಿಯೊಬ್ಬ ಅಧಿಕಾರಿಗಳು ಅರಿತು ಪ್ರಗತಿ ಪರಿಶೀಲನಾ ಸಭೆಗೆ ಮಾಹಿತಿಯನ್ನು ಸಿದ್ಧಪಡಿಸಬೇಕು ಎಂದು ಜಿಲ್ಲಾಧಿಕಾರಿಗಳು ಸೂಚಿಸಿದರು.

ಸಭೆಯಲ್ಲಿ ಇಲಾಖಾವಾರು ಪ್ರಗತಿ ಪರಿಶೀಲನೆ ನಡೆಯಲಿದೆ. ಅಧಿಕಾರಿಗಳು ತಮ್ಮ ಇಲಾಖೆಯ ಮಾಹಿತಿಯನ್ನು ಶಿಸ್ತುಬದ್ಧವಾಗಿ, ಸ್ಫುಟವಾಗಿ ಸಿದ್ಧಪಡಿಸಿ ತುರ್ತಾಗಿ ಸಲ್ಲಿಸಬೇಕು. ಅಧಿಕಾರಿಗಳು ಮಾಹಿತಿಯನ್ನು ಸರಿಯಾಗಿ ನೀಡಬೇಕು. ತಪ್ಪು ಮಾಹಿತಿಯನ್ನು ನೀಡಬಾರದು ಎಂದು ತಿಳಿಸಿದರು.



ಸಿಎಂ ನಡೆಸುವ ಸಭೆಗೆ ಕಡ್ಡಾಯವಾಗಿ ಅಧಿಕಾರಿಗಳೇ ಹಾಜರಿರಬೇಕು. ಪ್ರಗತಿ ಪರಿಶೀಲನಾ ಸಭೆಯ ಬಗ್ಗೆ ಅಧಿಕಾರಿಗಳು ನಿರ್ಲಕ್ಷ್ಯ ವಹಿಸಬಾರದು. ಯಾರಾದರು ತಪ್ಪು ಮಾಹಿತಿ ನೀಡಿರುವುದು ಮತ್ತು ಸಭೆಗೆ ಗೈರು ಹಾಜರಾಗಿರುವುದು ಕಂಡು ಬಂದಲ್ಲಿ ಯಾವುದೇ ಮುಲಾಜಿಲ್ಲದೇ ಶಿಸ್ತುಕ್ರಮ ಜರುಗಿಸಲಾಗುವುದು ಎಂದು ಎಚ್ಚರಿಕೆ ನೀಡಿದರು.

ಜಿಪಂ ಸಿಇಒ ಬಿ.ಸದಾಶಿವ ಪ್ರಭು ಮಾತನಾಡಿ, ಯಾವುದೇ ಗೊಂದಲಕ್ಕೆ ಅವಕಾಶವಿಲ್ಲದ ಹಾಗೆ ಮಾಹಿತಿಯನ್ನು ಸಿದ್ದಪಡಿಸಬೇಕು. ಓದಲು ಮತ್ತು ತಿಳಿಯಲು ಅನುಕೂಲವಾಗುವಂತೆ ಸರಿಯಾದ ಮಾದರಿಯಲ್ಲಿ ಮಾಹಿತಿಯನ್ನು ಸಿದ್ಧಪಡಿಸಿ ನೀಡಬೇಕು. ಸಭೆ ನಡೆಸುವಾಗ ಬರಬಹುದಾದ ಅನಿರೀಕ್ಷಿತ ಪ್ರಶ್ನೆಗಳಿಗೆ ಸ್ಥಳದಲ್ಲಿಯೇ ಉತ್ತರಿಸುವ ಹಾಗೆ ಅಧಿಕಾರಿಗಳು ತಮ್ಮ ತಮ್ಮ ಇಲಾಖೆಯ ಪ್ರತಿಯೊಂದು ಮಾಹಿತಿಯೊಂದಿಗೆ ಸಭೆಗೆ ಹಾಜರಾಗಬೇಕು ಎಂದು ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಸಭೆಯಲ್ಲಿ ಜಿಲ್ಲಾ ಪಂಚಾಯತ್ ಮುಖ್ಯ ಯೋಜನಾಧಿಕಾರಿ ಅನ್ನದಾನೇಶ್ವರ ಸ್ವಾಮಿ ಜೆ.ಎಂ., ವಿಜಯನಗರ ನಗರಾಭಿವೃದ್ಧಿ ಪ್ರಾಧಿಕಾರದ ಆಯುಕ್ತರಾದ ಈರಣ್ಣ, ಸಮಾಜ ಕಲ್ಯಾಣ ಇಲಾಖೆಯ ಜಂಟಿ ನಿರ್ದೇಶಕರಾದ ಮಂಜುನಾಥ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಉಪ ನಿರ್ದೇಶಕರಾದ ರಾಮಚಂದ್ರಪ್ಪ, ಆಹಾರ ಇಲಾಖೆಯ ಉಪ ನಿರ್ದೇಶಕರಾದ ಮಲ್ಲಿಕಾರ್ಜುನ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಇಲಾಖೆಯ ಅಧಿಕಾರಿ ಡಾ.ಶಂಕರ ನಾಯಕ, ಜಿಲ್ಲಾ ವಾರ್ತಾಧಿಕಾರಿ ಗವಿಸಿದ್ದಪ್ಪ ಸೇರಿದಂತೆ ಇನ್ನಿತರ ಇಲಾಖೆಯ ಅಧಿಕಾರಿಗಳು ಇದ್ದರು.

ಹೆಚ್ಚಿನ ಸುದ್ದಿಗಾಗಿ ಭೇಟಿ ನೀಡಿ: www.hampitimes.com


BOOK PROPERTY ADS
in HAMPI TIMES Daily News Paper



Publish Property / Real Estate Classified Text or Display Advertisement in Hampi Times News Paper at cost effective packages

Visit Us
epaper.hampitimes.com
www.hampitimes.com

94486 33038

## ನಿತ್ಯ ಪಂಚಾಂಗ

ಮಾಸ: ಜ್ಯೇಷ್ಠ । ಸಂವತ್ಸರ: ಕ್ರೋಧಿ

16–06–2024 – ಭಾನುವಾರ

| | |
|---|---|
| ತಿಥಿ | : ದಶಮಿ |
| ಪಕ್ಷ | : ಶುಕ್ಲ |
| ನಕ್ಷತ್ರ | : ಹಸ್ತ |
| ಯೋಗ | : ವರಿಯಾಣ |
| ಕರಣ | : ತೈತುಲ |
| ಸೂರ್ಯೋದಯ | : 05:42:25 |
| ಸೂರ್ಯಾಸ್ತ | : 19:13:09 |
| ರಾಹು | : 17:32–19:13 |
| ಯಮಘಂಡ | : 12:28–14:09 |
| ಗುಳಿಕ | : 15:50–17:32 |

## ತುಂಗಭದ್ರಾ ನೀರಿನ ಮಟ್ಟ



ಶನಿವಾರ : 15–06–2024

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1582.89 ಅಡಿ |
| ಒಳ ಹರಿವು | 1676 ಕ್ಯುಸೆಕ್ |
| ಹೊರ ಹರಿವು | 301 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 6.024 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| **ಕಳೆದ ವರ್ಷ ಇದೇ ದಿನ** | |
| ಇಂದಿನ ಮಟ್ಟ | 1581 ಅಡಿ |
| ಒಳ ಹರಿವು | 0 ಕ್ಯುಸೆಕ್ |
| ಹೊರ ಹರಿವು | 272 ಕ್ಯುಸೆಕ್ |
| ಸಾಮರ್ಥ್ಯ | 4.975 ಟಿಎಂಸಿ |

ವಿವೇಕಶ್ರೇಯಾಲಾಪ
ಸಂಗೀತ ತರಬೇತಿ
VIVĒKASRĒYĀLĀPA
VEENA INSTRUMENTAL
VOCAL - KARNATIC
AND FILM MUSIC Classes
contact for more information
91082 26938
90368 65666
Near Honda Showroom, Hosapete-583201

# ಕೃಷಿಭೂಮಿ ಮಾರಾಟ ತಡೆಯಿರಿ ಹಸಿರು ವಲಯ ಘೋಷಣೆಗೆ ಒತ್ತಾಯ

**ಹಂಪಿ ಟೈಮ್ಸ್ ಹಗರಿಬೊಮ್ಮನಹಳ್ಳಿ**

ರಿಯಲ್ ಎಸ್ಟೇಟ್ ದಂಧೆಯಿಂದ ಪಟ್ಟಣದ 5–6 ಕಿ.ಮೀ.ವ್ಯಾಪ್ತಿಯ ಇತ್ತೀಚಿಗೆ ಕೃಷಿಭೂಮಿ ಉಳಿಯುತ್ತಿಲ್ಲ. ಇದೇ ರೀತಿ ಮುಂದುವರೆದರೆ ಶೀಘ್ರದಲ್ಲೇ ಕೃಷಿಗೆ ಭೂಮಿ ಸಂಪೂರ್ಣ ಕರಗುತ್ತದೆ ಎಂದು ಕೃಷಿ ಭೂಮಿ ಉಳಿವಿಗಾಗಿ ಜನಜಾಗೃತಿ ಜಾಥದ ಸಂಚಾಲಕ ಬುಡ್ಡಿ ಬಸವರಾಜ್ ಕಳವಳ ವ್ಯಕ್ತಪಡಿಸಿದರು.



ಪಟ್ಟಣದ ಕೃಷಿಕಭವನದಲ್ಲಿ ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದರು. ಜೂ.17ರ ಸೋಮವಾರ ಬೆಳಗ್ಗೆ 10.30ಕ್ಕೆ ಪಟ್ಟಣದ ಹಗರಿ ಆಂಜನೇಯಸ್ವಾಮಿ ದೇಗುಲದ ಆವರಣದಲ್ಲಿ ಕೃಷಿಭೂಮಿ ಉಳಿಸಿ ಆಂದೋಲನ ನಡೆಯಲಿದ್ದು, ಜನಜಾಗೃತಿ ಜಾಥಕ್ಕೆ ಚಾಲನೆ ನೀಡಲಾಗುವುದು ಎಂದರು. ಪಟ್ಟಣಕ್ಕೆ ಹೊಂದಿಕೊಂಡಿರುವ ಫಲವತ್ತಾದ ಕೃಷಿಭೂಮಿಗಳನ್ನು, ಹೊರಗಿನಿಂದ ಬರುತ್ತಿರುವವರು ಅಮಾಯಕ ರೈತರಿಗೆ ಆಮಿಷಗಳನ್ನೊಡ್ಡಿ ಭೂಮಿಗಳನ್ನು ಖರೀದಿಸುತ್ತಿದ್ದಾರೆ. ಇಂದು ಕಳೆದುಕೊಳ್ಳುತ್ತಿರುವ ಕೃಷಿ ಭೂಮಿಗಳು ಮುಂದೆ ಕೃಷಿಕರ ಪಾಲಿಗೆ ಇಲ್ಲದಂತಾಗುತ್ತದೆ. ಪುರಸಭೆ ವ್ಯಾಪ್ತಿಯ ಸುಮಾರು 10.ಕಿ.ಮೀ.ವ್ಯಾಪ್ತಿಯ ನಾಲ್ಕಾರು ಗ್ರಾ.ಪಂ.ಗಳನ್ನೊಳಗೊಂಡ ಗ್ರಾಮಗಳಾದ ಕಡಲಬಾಳು, ಮಾಲವಿ, ಬ್ಯಾಸಗಿದೇರಿ ಹಾಗೂ ವಲ್ಲಾಭಾಪುರ ಗ್ರಾ.ಪಂ.ಗಳ ವ್ಯಾಪ್ತಿಯಲ್ಲಿನ ಪ್ರದೇಶವನ್ನು ಹಸಿರು ವಲಯವೆಂದು ಘೋಷಿಸುವಂತೆ ಆಗ್ರಹಿಸುತ್ತೇವೆ ಎಂದರು. ಜಾಥದ ಮೂಲಕ, ಕೃಷಿ ಭೂಮಿಗಳನ್ನು ಕಳೆದುಕೊಳ್ಳುತ್ತಿರುವುದರಿಂದ ಆಗುವಂತ ಪರಿಣಾಮಗಳಬಗ್ಗೆಜಾಗೃತಿಮೂಡಿಸಲಾಗುವುದು ಈ ಜಾಥವನ್ನು ಕೃಷಿ ತಜ್ಞರಾದ ವಿಶ್ವೇಶ್ವರ ಸಜ್ಜನರು ಚಾಲನೆ ನೀಡಲಿದ್ದಾರೆ ಎಂದರು. ಪಟ್ಟಣ ವ್ಯಾಪ್ತಿಯ ಸಾರ್ವಜನಿಕರು ಪಾಲ್ಗೊಳ್ಳುವ ಮೂಲಕಅಂದೋಲಯಶಸ್ವಿಗೆಕಾರಣರಾಗಬೇಕು ಎಂದು ಕೋರಿದರು.

ಡಾ.ಬಿ.ಆರ್.ಅಂಬೇಡ್ಕರ್ ಸಂಘದ ತಾಲೂಕು ಅಧ್ಯಕ್ಷ ಗದ್ದಿಕೆರೆ ಎಚ್.ದೊಡ್ಡಬಸಪ್ಪ ಮಾತನಾಡಿ, ರೈತನು ಸಂಕಷ್ಟದಲ್ಲಿದ್ದಾನೆ. ಇದನ್ನೇ ದುರುಪ ಯೋಗಮಾಡಿಕೊಂಡ ಕೆಲವರು ರೈತರಿಂದ ಕೃಷಿ ಭೂಮಿಗಳನ್ನು ಮಾರಿಸುತ್ತಿದ್ದಾರೆ. ಇದರ ಉಳುವಿವಾಗಿ ನಾವು ಹೋರಾಟದ ಆಂದೋಲನ ರೂಪರೇಷಗಳನ್ನು ಮಾಡಿಕೊಂಡಿದ್ದು, ಇಂದು ಎಚ್ಚೆತ್ತುಕೊಳ್ಳದಿದ್ದರೆ, ಮುಂದೆ ಕೃಷಿ ಭೂಮಿ ಕಳೆದುಕೊಳ್ಳುವವರು ಪರದಾಡಬೇಕಾಗುತ್ತದೆ ಎಂದರು.

ಈ ವೇಳೆ ಕಡಲಬಾಳು ಗ್ರಾ.ಪಂ.ಯಉಪಾಧ್ಯಕ್ಷ ಒಂಟಿಗೂಡಿ ವೀರೇಶ್, ಛಲವಾದಿ ಮಹಾಸಭಾದ ತಾಲೂಕು ಅಧ್ಯಕ್ಷ ಕಹಳೆ ಬಸವರಾಜ್, ನಿವೃತ್ತ ಸೈನಿಕ ಗದ್ದಿಕೆರೆ ರಾಮರಡ್ಡಿ, ಮುಟುಗನಹಳ್ಳಿ ಹನುಮಂತಪ್ಪ, ಕುರುಬರ ಸಮುದಾಯದ ತಾಲೂಕು ಅಧ್ಯಕ್ಷ ಶಿವರಾಜ್, ಆನೇಕಲ್‌ನ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಲಿಂಗರಾಜ್ ಯಾದವ್, ಬಲ್ಲಾಹುಣಸಿ ಮುಖಂಡ ನಾಗರಾಜ್, ದಾದಮ್ಮನವರ ಬಸವರಾಜ್, ಪೂಜಾರ್ ಸಿದ್ದಪ್ಪ, ಶಾಂತಪ್ಪ, ಸುರೇಂದ್ರ, ದಾದಾಪೀರ್, ಉಮೇಶ ಮತ್ತಿತರರು ಇದ್ದರು.

# ಶಿಕ್ಷಕರು ಮಕ್ಕಳು– ಪೋಷಕರಲ್ಲಿ ಅರಿವು ಹೆಚ್ಚಿಸಿ

## ನ್ಯಾ.ರಾಜೇಶ್ ಎನ್.ಹೊಸಮನೆ ಹೇಳಿಕೆ । ಪ್ರಾಂಶುಪಾಲರಿಗೆ, ಮುಖ್ಯಗುರುಗಳಿಗೆ ಕಾರ್ಯಾಗಾರ



**ಹಂಪಿ ಟೈಮ್ಸ್ ಬಳ್ಳಾರಿ**

ಬಾಲ್ಯ ವಿವಾಹ, ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ ತಡೆಗಟ್ಟುವ ಕುರಿತು ಮಕ್ಕಳಿಗೆ ಮತ್ತು ಪೋಷಕರಿಗೆ ಅರಿವು ಮೂಡಿಸುವಲ್ಲಿ ಶಿಕ್ಷಕರ ಪಾತ್ರ ಮಹತ್ವದ್ದಾಗಿದೆ ಎಂದು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಹಾಗೂ ಹಿರಿಯ ಸಿವಿಲ್ ನ್ಯಾಯಧೀಶರಾದ ರಾಜೇಶ್ ಎನ್.ಹೊಸಮನೆ ಹೇಳಿದರು.

ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ರಾಜ್ಯ ವಸತಿ ಶಿಕ್ಷಣ ಸಂಸ್ಥೆಗಳ ಸಂಘ ಹಾಗೂ ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಇವರ ಸಂಯುಕ್ತಾಶ್ರಯದಲ್ಲಿ 'ಬಾಲ್ಯವಿವಾಹ, ಪೋಕ್ಸೊ ಕಾಯ್ದೆ ಹಾಗೂ ಮಕ್ಕಳ ರಕ್ಷಣಾ ನೀತಿ 2016 (ಪರಿಷ್ಕರಣೆ–2023)' ಕುರಿತು ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲರು ಹಾಗೂ ಸರ್ಕಾರಿ, ಅನುದಾನಿತ ಪ್ರೌಢಶಾಲೆಯ ಮುಖ್ಯ ಗುರುಗಳಿಗೆ ನಗರದ ಕೋಟೆ ಪ್ರದೇಶದ ಜಿಲ್ಲಾ ಪಂಚಾಯತ್‌ನ ನಜೀರ್ ಸಭಾಂಗಣದಲ್ಲಿ ಶನಿವಾರ ಏರ್ಪಡಿಸಿದ್ದ ಒಂದು ದಿನದ ಕಾರ್ಯಾಗಾರವನ್ನು ಉದ್ಘಾಟಿಸಿ ಅವರು ಮಾತನಾಡಿದರು. ಮಕ್ಕಳನ್ನು ಲೈಂಗಿಕ ದೌರ್ಜನ್ಯದಿಂದ ರಕ್ಷಣೆ ಕೊಡಿಸಬೇಕು. ಹೆಣ್ಣು ಮಕ್ಕಳಿಗೆ ಶಿಕ್ಷಣ ಒದಗಿಸಿ ಸಮಾಜದಲ್ಲಿ ಸಮಾನತೆ ಒದಗಿಸುವುದು ಅಧಿಕಾರಿಗಳ ಕರ್ತವ್ಯವಾಗಿದೆ ಎಂದರು.

ಬಾಲ್ಯ ವಿವಾಹವು ಸಾಮಾಜಿಕ ಪಿಡುಗಾಗಿದ್ದು, ಹೆಣ್ಣು ಮಕ್ಕಳ ಮೇಲೆ ಮಾನಸಿಕ ಒತ್ತಡ ಮತ್ತು ದೈಹಿಕವಾಗಿ ದುಷ್ಪರಿಣಾಮ ಬೀರುತ್ತದೆ. ಈ ಬಗ್ಗೆ ಶಾಲಾ–ಕಾಲೇಜುಗಳಲ್ಲಿ ಅರಿವು ಮೂಡಿಸುವ ಅಗತ್ಯವಿದೆ. ಈ ದಿಸೆಯಲ್ಲಿ ಶಿಕ್ಷಕರು ಮಹತ್ವದ ಜವಾಬ್ದಾರಿ ನಿರ್ವಹಿಸಬೇಕು ಎಂದು ತಿಳಿಸಿದರು.

ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಾಹುಲ್ ಶರಣಪ್ಪ ಸಂಕನೂರ ಮಾತನಾಡಿ, ರಾಷ್ಟ್ರ ಸಮಗ್ರ ಅಭಿವೃದ್ಧಿ ಹೊಂದಲು ಆರ್ಥಿಕ, ತಾಂತ್ರಿಕ, ಶೈಕ್ಷಣಿಕದ ಜೊತೆಗೆ ಕಾನೂನಾತ್ಮಕವಾಗಿ ಹೆಣ್ಣುಮಕ್ಕಳ ಬೆಳವಣಿಗೆ ಮುಖ್ಯವಾಗುತ್ತದೆ ಎಂದರು.

13 ರಿಂದ 18 ವರ್ಷದೊಳಗಿನ ಮಕ್ಕಳನ್ನು ದಾರಿತಪ್ಪದಂತೆ ನೋಡಿಕೊಳ್ಳುವುದು ಪೋಷಕರ ಮತ್ತು ಶಿಕ್ಷಕರ ಕರ್ತವ್ಯವಾಗಿದೆ. ಹೆಣ್ಣು ಮಕ್ಕಳು ಶಿಕ್ಷಣದಿಂದ ವಂಚಿತರಾಗದೇ ಶೈಕ್ಷಣಿಕವಾಗಿ ವಿದ್ಯಾವಂತರಾದಾಗ ಕುಟುಂಬದ ಏಳಿಗೆಗೆ ಸಹಕಾರಿಯಾಗುತ್ತದೆ ಎಂದು ತಿಳಿಸಿದರು.

ಬಾಲ್ಯ ವಿವಾಹ ನಿಯಂತ್ರಿಸಲು, ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ ತಡೆಗಟ್ಟಲು ಪೋಕ್ಸೋ ಕಾಯ್ದೆಯಡಿ ಸಮಾಲೋಚನೆ ಕೇಂದ್ರ ತೆರೆಯಲಾಗಿದ್ದು, ಮಕ್ಕಳ ಸಹಾಯವಾಣಿ 1098 ಗೆ ಸಂಪರ್ಕಿಸುವಂತೆ ಅರಿವು ಮೂಡಿಸಬೇಕು ಎಂದು ತಿಳಿಸಿದರು.

ಮಕ್ಕಳ ಕಲ್ಯಾಣ ಸಮಿತಿಯ ಅಧ್ಯಕ್ಷರಾದ ವಿಜಯಲಕ್ಷ್ಮೀ ಮೈದೂರು ಅವರು ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿ ಮಾತನಾಡಿ, ಶಾಲಾ–ಕಾಲೇಜುಗಳಲ್ಲಿ ಹೆಣ್ಣು ಮಕ್ಕಳಿಗೆ ಹಿಂಸೆ ಆದಾಗ ಅಥವಾ ತೊಂದರೆಗೆ ಒಳಗಾದಾಗ ಮೊದಲು ಶಿಕ್ಷಕರಿಗೆ ತಿಳಿಸಲು ಮುಂದಾಗುತ್ತಾರೆ, ವಿದ್ಯಾರ್ಥಿಗಳ ಮಾನಸಿಕ ಭಾವನೆಗಳನ್ನು ಶಿಕ್ಷಕರು ಅರಿತು ಮಕ್ಕಳಿಗೆ ಕಾನೂನಾತ್ಮಕ ನ್ಯಾಯ ಒದಗಿಸುವುವು ಅವರ ಕರ್ತವ್ಯವಾಗಿದೆ ಎಂದರು.

ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಉಪ ನಿರ್ದೇಶಕ ವಿಜಯ್ ಕುಮಾರ್ ಕೆ.ಹೆಚ್ ಅವರು ಅಧ್ಯಕ್ಷತೆ ವಹಿಸಿ ಮಾತನಾಡಿ, ಶಿಕ್ಷಕರು ಮಕ್ಕಳ ಸಮಸ್ಯೆಗಳನ್ನು ಅರಿತುಕೊಂಡು ಸಂಬಂಧಪಟ್ಟ ಇಲಾಖೆಗೆ ಮಾಹಿತಿ ಒದಗಿಸಬೇಕು. ಸರ್ಕಾರದ ಆದೇಶದಂತೆ ಪ್ರತಿ ಶಾಲೆಗಳಲ್ಲಿ ಮಕ್ಕಳ ರಕ್ಷಣಾ ಸಮಿತಿ ರಚಿಸಬೇಕು. ಮೂರು ತಿಂಗಳಿಗೊಮ್ಮೆ ಸಭೆ ನಡೆಸಿ ವರದಿ ನೀಡಬೇಕು. ಮಕ್ಕಳ ಬಗ್ಗೆ ಶಿಕ್ಷಕರು ಕಾಳಜಿ ವಹಿಸಬೇಕು ಎಂದು ಹೇಳಿದರು.

ಬಳಿಕ ಕೊಪ್ಪಳ ಯೂನಿಸೇಫ್ ಮಕ್ಕಳ ಸಂರಕ್ಷಣಾ ಯೋಜನೆಯ ಪ್ರಾದೇಶಿಕ ಸಂಯೋಜಕರಾದ ಡಾ.ಕೆ.ರಾಘವೇಂದ್ರ ಭಟ್ ಅವರು 'ಬಾಲ್ಯವಿವಾಹ, ಪೋಕ್ಸೊ ಕಾಯ್ದೆ ಹಾಗೂ ಮಕ್ಕಳ ರಕ್ಷಣಾ ನೀತಿ 2016 (ಪರಿಷ್ಕರಣೆ–2023)' ಕುರಿತು ಮಾಹಿತಿ ನೀಡಿದರು.

ಈ ಸಂದರ್ಭದಲ್ಲಿ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಉಪನಿರ್ದೇಶಕಿ ಉಮಾದೇವಿ, ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿ ಹಾಗೂ ಪ್ರಭಾರಿ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ಜಲಾಲಪ್ಪ.ಎ.ಕೆ ಸಿಬ್ಬಂದಿ ಸೇರಿದಂತೆ ಕಾಲೇಜು ಪ್ರಾಂಶುಪಾಲರು, ಶಾಲಾ ಮುಖ್ಯೋಪಾಧ್ಯಾಯರು ಉಪಸ್ಥಿತರಿದ್ದರು.

# ಜೂ.21 ಸಿಎಂ ಅಧ್ಯಕ್ಷತೆಯಲ್ಲಿ ಬಳ್ಳಾರಿ ಜಿಲ್ಲೆಯ ಪ್ರಗತಿ ಪರಿಶೀಲನೆ

## ಅಗತ್ಯ ಮಾಹಿತಿಯೊಂದಿಗೆ ಸಿದ್ಧತೆಯಲ್ಲಿರುವಂತೆ ಅಧಿಕಾರಿಗಳಿಗೆ ಡಿಸಿ ಮಿಶ್ರಾ ಸೂಚನೆ

**ಹಂಪಿ ಟೈಮ್ಸ್ ಬಳ್ಳಾರಿ**

ಮುಖ್ಯಮಂತ್ರಿ ಸಿದ್ಧರಾಮಯ್ಯ ಅವರು ಜೂ.21 ರಂದು ಜಿಲ್ಲೆಯ ಪ್ರಗತಿ ಪರಿಶೀಲನಾ ಸಭೆ ಕೈಗೊಳ್ಳುವುದಾಗಿ ತಿಳಿದು ಬಂದಿದ್ದು, ಜಿಲ್ಲಾ ಮಟ್ಟದ ಅಧಿಕಾರಿಗಳು ತಮ್ಮ ಇಲಾಖೆಗಳ ಅಗತ್ಯ ಮಾಹಿತಿಯೊಂದಿಗೆ ಸಿದ್ಧರಿರಬೇಕು ಎಂದು ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಅವರು ಸೂಚಿಸಿದರು.



ನಗರದ ಜಿಲ್ಲಾ ಪಂಚಾಯತ್‌ನ ನಜೀರ್ ಸಾಬ್ ಸಭಾಂಗ ಣದಲ್ಲಿ ಶನಿವಾರ ಹಮ್ಮಿಕೊಂಡಿದ್ದ ಪೂರ್ವ ಸಿದ್ಧತಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಜೂ.21 ರಂದು ಸಿಎಂ ಸಿದ್ಧರಾಮಯ್ಯನವರು ಬಳ್ಳಾರಿ ಜಿಲ್ಲೆಯಲ್ಲಿ ಪ್ರವಾಸ ಕೈಗೊಳ್ಳಲಿದ್ದಾರೆ ಎಂದು ಮುಖ್ಯಮಂತ್ರಿಗಳ ಕಚೇರಿಯಿಂದ ಮಾಹಿತಿ ಲಭಿಸಿದ್ದು, ಇದಕ್ಕೆ ಪೂರಕವಾಗಿ ಅಧಿಕಾರಿಗಳು ತಮ್ಮ ಇಲಾಖೆಗಳ ಯೋಜನೆಗಳ ಪ್ರಗತಿ ಮಾಹಿತಿ, ಕಾಮಗಾರಿಗಳ ಸ್ಥಿತಿಗತಿ ಹಾಗೂ ಇತರೆ ಸಮಗ್ರ ವಿವರಗಳನ್ನು ಸಿದ್ಧತೆಯಲ್ಲಿಟ್ಟುಕೊಳ್ಳುವಂತೆ ಅವರು ತಿಳಿಸಿದರು.

ಜಿಲ್ಲೆಯಲ್ಲಿ ಕಳೆದ ಸಾಲಿನಲ್ಲಿ ಉದ್ಭವಿಸಿದ ಬರ ನಿರ್ವಹಣೆಯ ಕ್ರಮ, ಬೆಳೆ ವಿಮೆ, ಬರ ಪರಿಹಾರ ಹಾಗೂ ಪ್ರಸ್ತುತ ಸಾಲಿನ ಮಳೆ ವಿವರ, ರಸಗೊಬ್ಬರ, ಬಿತ್ತನೆ ಬೀಜಗಳ ದಾಸ್ತಾನು ಹಾಗೂ ವಿವಿಧ ಯೋಜನೆಗಳ ಮಾಹಿತಿ ಸಮರ್ಪಕವಾಗಿ ಒದಗಿಸಬೇಕು ಎಂದು ಜಂಟಿ ಕೃಷಿ ನಿರ್ದೇಶಕರಿಗೆ ತಿಳಿಸಿದರು.

ಜಿಲ್ಲೆಯಲ್ಲಿ ಮೇವಿನ ಲಭ್ಯತೆ, ರಾಸುಗಳ ಆರೋಗ್ಯ ಸ್ಥಿತಿ–ಗತಿ, ಬೆಳವಣಿಗೆ ಕ್ರಮ, ಹಾಲು ಉತ್ಪಾದನೆ ಹಾಗೂ ಇತರೆ ಮಾಹಿತಿ ಬಗ್ಗೆ ವಿಚಾರಿಸುವರು. ಈ ಬಗ್ಗೆ ನಿಖರ ಮಾಹಿತಿ ನೀಡಬೇಕು ಎಂದು ಪಶು ಮತ್ತು ಸಂಗೋಪನಾ ಇಲಾಖೆ ಅಧಿಕಾರಿಗಳಿಗೆ ಸೂಚಿಸಿದರು.

ಜಿಲ್ಲೆಯ ಶೈಕ್ಷಣಿಕ ಅಭಿವೃದ್ಧಿಗೆ ಸಂಬಂಧಿಸಿದ ಉಪಕ್ರಮ, ಶಾಲೆಗಳ ಸ್ಥಿತಿ–ಗತಿ, ಗುಣಮಟ್ಟದ ಶಿಕ್ಷಣದ ಕುರಿತಾಗಿ ಅನುಷ್ಠಾನಗೊಳಿಸಿದ ರೂಪು–ರೇಷೆಗಳ ಬಗ್ಗೆ ಮಾಹಿತಿ ಹೊಂದಿರಬೇಕು ಎಂದು ಡಿಡಿಪಿಐ ಅವರಿಗೆ ನಿರ್ದೇಶನ ನೀಡಿದರು.

ಜಿಲ್ಲೆಯಲ್ಲಿನ ವಸತಿ ಶಾಲೆಗಳಿಗೆ ಭೇಟಿ ನೀಡಬೇಕು. ಅಲ್ಲಿನ ಗುಣಮಟ್ಟದ ಆಹಾರ ಪೂರೈಕೆ, ಸ್ವಚ್ಛತೆ ಹಾಗೂ ಇತರೆ ಮೂಲಭೂತ ಸೌಕರ್ಯಗಳ ಬಗ್ಗೆ ಗಮನಿಸಬೇಕು. ಯಾವುದೇ ದೂರು ಉಲ್ಲೇಖವಾಗಬಾರದು ಎಂದು ಸಮಾಜ ಕಲ್ಯಾಣ ಇಲಾಖೆ, ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳಿಗೆ ಸೂಚಿಸಿದರು.

ಬಳ್ಳಾರಿ ನಗರದಲ್ಲಿ ಕುಡಿಯುವ ನೀರಿನ ಪೂರೈಕೆ, ರಾಜಕಾಲುವೆಯ ಸ್ವಚ್ಛತೆ, ಕಸ ವಿಲೇವಾರಿ ಪರಿಕ್ರಮ, ರಸ್ತೆಗಳ ಸ್ವಚ್ಛತೆ ಕುರಿತು ಕಾರ್ಯೋನ್ಮುಖರಾಗುವಂತೆ ಮಹಾನಗರ ಪಾಲಿಕೆಯ ಆಯುಕ್ತರಿಗೆ ನಿರ್ದೇಶನ ನೀಡಿದರು.

ಗ್ರಾಮೀಣ ಭಾಗಗಳಲ್ಲಿ ಶುದ್ಧ ಕುಡಿಯುವ ನೀರಿನಪೂರೈಕೆ,ಸ್ವಚ್ಛತೆಯಕ್ರಮನಿರ್ವಹಿಸುವಂತೆ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖಾಧಿಕಾರಿಗಳಿಗೆ, ಎಲ್ಲಾ ಇಲಾಖೆ ಅಧಿಕಾರಿಗಳಿಗೆ ಡಿಸಿ ಪ್ರಶಾಂತ್ ಕುಮಾರ್ ಮಿಶ್ರಾ ಕಟ್ಟುನಿಟ್ಟಿನ ಸೂಚನೆ ಮಾಡಿದರು.

# ಪರಿಶಿಷ್ಟ ವರ್ಗದ ಕಾನೂನು ಪದವೀಧರಗೆ ವೃತ್ತಿ ತರಬೇತಿಗೆ ಅರ್ಜಿ ಆಹ್ವಾನ

**ಹಂಪಿ ಟೈಮ್ಸ್ ಹೊಸಪೇಟೆ**

2024–25ನೇ ಶೈಕ್ಷಣಿಕ ಸಾಲಿನ ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯಿಂದ ಪರಿಶಿಷ್ಟ ಪಂಗಡದ ಕಾನೂನು ಪದವೀಧರರಿಗೆ ವೃತ್ತಿ ತರಬೇತಿ ನೀಡಲು ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ವಿಜಯನಗರ ಜಿಲ್ಲೆಯ ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿಗಳ ಕಚೇರಿ ವ್ಯಾಪ್ತಿಗೆ ಬರುವ ಪರಿಶಿಷ್ಟ ಪಂಗಡದ ಕಾನೂನು ಪದವೀಧರರಿಗೆ 2024–25ನೇ ಸಾಲಿಗೆ ಆಡಳಿತ ನ್ಯಾಯಾಧೀಕರಣದಲ್ಲಿ 2 ವರ್ಷಗಳ ವೃತ್ತಿ ತರಬೇತಿಯನ್ನು ನೀಡಲಾಗುವುದು. ಆದ್ದರಿಂದ ಅರ್ಹ ಪರಿಶಿಷ್ಟ ಪಂಗಡದ ಅಭ್ಯರ್ಥಿಗಳು ಆನ್‌ಲೈನ್ ಮೂಲಕ ಅರ್ಜಿಗಳನ್ನು ಜೂನ್ 18 ರಿಂದ ಜುಲೈ 31ರವರೆಗೆ ಸಲ್ಲಿಸಬಹುದಾಗಿದೆ.


ಈ ತರಬೇತಿಯನ್ನು ಪಡೆಯಲು ಇಚ್ಛಿಸುವ ಅಭ್ಯರ್ಥಿಗಳು ಪರಿಶಿಷ್ಟ ಪಂಗಡಕ್ಕೆ ಸೇರಿದವರಾಗಿರಬೇಕು., ತಂದೆ, ತಾಯಿ, ಪೋಷಕರ ವಾರ್ಷಿಕ ಆದಾಯ ರೂ.2.50 ಲಕ್ಷಕ್ಕಿಂತ ಹೆಚ್ಚಿರಬಾರದು., ವಿಜಯನಗರ ಜಿಲ್ಲೆಗೆ ಮಾತ್ರ ಸಂಬಂಧಿಸಿದ ಹಾಗೂ ವಕೀಲ ವೃತ್ತಿ ನಡೆಸಲು ಅರ್ಹತೆಯುಳ್ಳ ಕಾನೂನು ಪದವೀಧರರು ಮಾತ್ರ ಈ ತರಬೇತಿಗೆ ಅರ್ಹರಾಗಿರುತ್ತಾರೆ., ಅರ್ಜಿಗಳನ್ನು ಸಲ್ಲಿಸಲು ನಿಗದಿಪಡಿಸಿರುವ ಕೊನೆಯ ದಿನಾಂಕಕ್ಕೆ 2 ವರ್ಷದೊಳಗೆ ಕಾನೂನು ಪದವಿಯನ್ನು ಪಡೆದಿರಬೇಕು. ಅಭ್ಯರ್ಥಿಯು ಕಾನೂನು ಪದವಿಯಲ್ಲಿ ಉತ್ತೀರ್ಣರಾದ 02 ವರ್ಷಗಳೊಳಗೆ ಕರ್ನಾಟಕ ಬಾರ್ ಅಸೋಸಿಯೇಷನ್‌ನಲ್ಲಿ ನೋಂದಣಿ ಮಾಡಿಸಿರಬೇಕು. ಆಭ್ಯರ್ಥಿಗಳು ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯ ವೆಬ್‌ಸೈಟ್ www.tw.kar.nic.in ಗೆ ಭೇಟಿ ನೀಡಿ, ಅರ್ಜಿಗಳು/Applications ಲಿಂಕ್ ಮೂಲಕ ಅರ್ಜಿ ಸಲ್ಲಿಸಿಲ್ಲಿಸಬಹುದು ಎಂದು ವಿಜಯನಗರ ಜಿಲ್ಲೆಯ ಕಾನೂನು ಪದವೀಧರರ ನ್ಯಾಯಾಂಗ ಆಡಳಿತ ತರಬೇತಿ ಆಯ್ಕೆ ಸಮಿತಿ, ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿಗಳು ಹಾಗೂ ಸದಸ್ಯ ಕಾರ್ಯದರ್ಶಿಗಳು ತಿಳಿಸಿದ್ದಾರೆ.

## ವಿಜ್ಞಾನ

# ರಾತ್ರಿ ವೇಳೆ ಮರದ ಕೆಳಗೆ ಏಕೆ ಮಲಗಬಾರದು?

**ಆರ್.ಬಿ.ಗುರುಬಸವರಾಜ**

ಇಂದಿಗೂ ಇದು ಮೂಢನಂಬಿಕೆಯ ಪ್ರಶ್ನೆ ಎಂದೇ ಪರಿಗಣಿಸಲಾಗಿದೆ. ಆದರೆ ಇದು ಮೂಢನಂಬಿಕೆಯ ಪ್ರಶ್ನೆಯಲ್ಲ. ಇದರಲ್ಲಿನ ಸತ್ಯತೆ ತಿಳಿಯಲೇ ಬೇಕು. ಸಾಮಾನ್ಯವಾಗಿ ಮರಗಳು ಹಗಲಿನ ವೇಳೆ ಆಹಾರ ತಯಾರಿಕೆಯಲ್ಲಿ ಬ್ಯುಸಿಯಾಗಿರುತ್ತವೆ. ಆದರೆ ರಾತ್ರಿ ವೇಳೆ ಅವು ತಮ್ಮಲ್ಲಿನ ಕೆಲವು ಅನಗತ್ಯ ರಸಾಯನಿಕಗಳು ಹಾಗೂ ಹೆಚ್ಚಾದ ವಿಷಾನಿಲಗಳನ್ನು ಹೊರಹಾಕುತ್ತವೆ. ಇದನ್ನು ದೊಡ್ಡ ಪ್ರಮಾಣದಲ್ಲಿ ಉಸಿರಾಡಿದರೆ ಉಸಿರಾಟದ ಸಮಸ್ಯೆಗಳು ಅಥವಾ ಇತರ ಆರೋಗ್ಯ ಸಮಸ್ಯೆಗಳನ್ನು ಉಂಟುಮಾಡಬಹುದು. ಇವು ನಮಗೆ ಮಾರಕವಾಗಿವೆ. ಆದ್ದರಿಂದ ರಾತ್ರಿ ವೇಳೆ ಮರದ ಕೆಳಗೆ ಮಲಗಬಾರದು ಎಂದು ಹೇಳಿರುವುದು ಸರಿಯಾಗಿದೆ. ಅಲ್ಲದೇ ಈ ಹೇಳಿಕೆಗೆ ಇನ್ನೂ ಕೆಲ ಕಾರಣಗಳಿವೆ.



ಕೆಲವು ಮರದ ಕೊಂಬೆಗಳು ಯಾವಾಗ ಮುರಿದು ಬೀಳುತ್ತವೆ ಎಂದು ಹೇಳಲು ಆಗುವುದಿಲ್ಲ. ರಾತ್ರಿ ಮರದ ಕೆಳಗೆ ಮಲಗಿದಾಗ ರೆಂಬೆ ಕೊಂಬೆಗಳು ಮರಿದು ಬಿದ್ದು ಅಪಾಯಗಳನ್ನು ತಂದೊಡ್ಡ ಬಹುದು. ರಾತ್ರಿ ಮರದ ಕೆಳಗೆ ಮಲಗುವುದರಿಂದ ಮರ ಅಥವಾ ಅದರ ಸುತ್ತಲೂ ವಾಸಿಸುವ ಕೀಟಗಳು ಮತ್ತು ಪ್ರಾಣಿಗಳಿಂದ ತೊಂದರೆಗಳಾಗಬಹುದು. ಅಲ್ಲಿನ ಇರುವೆಗಳು, ದಂಶಕಗಳು, ಸೊಳ್ಳೆಗಳು, ಉಣ್ಣೆ, ಹೇನು, ತಿಗಣೆ, ಹಾವು, ಚೇಳು, ಜರಿಗಳಂತಹ ಸರೀಸೃಪಗಳ ಕಡಿತದ ಅಪಾಯಗಳಿರುತ್ತವೆ. ಮರದ ಕೆಳಗೆ ಮಲಗುವುದರಿಂದ ಮರ ಅಥವಾ ಅದರ ಸುತ್ತಲಿನ ಪ್ರದೇಶಕ್ಕೆ ಆಕರ್ಷಿತವಾಗುವ ಕಾಡು ಪ್ರಾಣಿಗಳಿಂದ ತೊಂದರೆಯಾಗಬಹುದು.

ಗುಡುಗು ಸಹಿತ ಮಳೆಯ ಸಮಯದಲ್ಲಿ ಮರದ ಕೆಳಗೆ ಮಲಗುವುದು ಅಥವಾ ನಿಲ್ಲುವುದು ಅಪಾಯಕಾರಿ. ಏಕೆಂದರೆ ಮರಗಳು ಸಿಡಿಲು ಬಡಿತಕ್ಕೆ ಸಾಮಾನ್ಯ ಗುರಿಯಾಗಿದೆ. ಹಾಗಾಗಿ ಮಳೆಗಾಲದಲ್ಲಿ ಮರದ ಕೆಳಗೆ ಆಶ್ರಯ ಪಡೆಯುವದು ಸೂಕ್ತವಲ್ಲ.

ಮರದ ಕೆಳಗೆ ಮಲಗುವುದರಿಂದ ನೀವು ಪರಾಗಕ್ಕೆ ಒಡ್ಡಿಕೊಳ್ಳಬಹುದು. ಇದು ಅಲರ್ಜಿಗಳು ಅಥವಾ ಇತರ ಉಸಿರಾಟದ ಸಮಸ್ಯೆಗಳನ್ನು ಪ್ರಚೋದಿಸಬಹುದು. ಮರದ ಕೆಳಗೆ ಮಲಗುವುದು ಈ ರೋಗಲಕ್ಷಣಗಳನ್ನು ಉಲ್ಬಣಗೊಳಿಸಬಹುದು.

ಒಟ್ಟಾರೆಯಾಗಿ, ಮರದ ಕೆಳಗೆ ಮಲಗುವುದು ಆಹ್ಲಾದಕರ ಮತ್ತು ಶಾಂತಿಯುತ ಕಲ್ಪನೆಯಂತೆ ಕಾಣಿಸಬಹುದು. ಆದರೆ ಸಂಭವನೀಯ ಅಪಾಯಗಳನ್ನು ಪರಿಗಣಿಸುವುದು ಮುಖ್ಯ. ಸುರಕ್ಷತೆ ಮತ್ತು ಯೋಗಕ್ಷೇಮವನ್ನು ಖಚಿತಪಡಿಸಿಕೊಳ್ಳಲು ಸೂಕ್ತ ಮುನ್ನೆಚ್ಚರಿಕೆಗಳನ್ನು ತೆಗೆದುಕೊಳ್ಳುವುದು ಅನಿವಾರ್ಯ. ಆದ್ದರಿಂದ ಮರದ ಕೆಳಗೆ ಮಲಗುವ ಮುನ್ನ ಒಮ್ಮೆ ಈ ಸಂಭಾವ್ಯ ತೊಂದರೆಗಳ ಗಮನ ಇರಲಿ.

# ಕಾನೂನು ಪದವೀಧರರಿಂದ ಅರ್ಜಿ ಆಹ್ವಾನ

**ಹಂಪಿ ಟೈಮ್ಸ್ ಹೊಸಪೇಟೆ**

2024–25ನೇ ಸಾಲಿನ ಸಮಾಜ ಕಲ್ಯಾಣ ಇಲಾಖೆ ವತಿಯಿಂದ ಕಾನೂನು ಪದವೀಧರರಿಗೆ ನ್ಯಾಯಾಧೀಕರಣದಲ್ಲಿ 2 ವರ್ಷ ತರಬೇತಿ ಭತ್ಯೆ ನೀಡುವ ಸಲುವಾಗಿ ಪರಿಶಿಷ್ಟ ಜಾತಿಯ ಅರ್ಹ ಅಭ್ಯರ್ಥಿಗಳಿಂದ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

ಅಭ್ಯರ್ಥಿಗಳು ಆನ್‌ಲೈನ್ ವೆಬ್‌ಸೈಟ್ www.sw.kar.nic.in ಗೆ ಭೇಟಿ ನೀಡಿ ಜೂ.18ರಿಂದ ಜೂ.31ರ ವರೆಗೆ ಅರ್ಜಿಗಳನ್ನು ಸಲ್ಲಿಸಲು ಕಾಲಾವಕಾಶ ನೀಡಲಾಗಿದೆ. ಜಿಲ್ಲೆಯ ಪರಿಶಿಷ್ಟ ಜಾತಿಯ ಅರ್ಹ ಕಾನೂನು ಪದವೀಧರರು ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿ, ನಿಗದಿತ ಅವಧಿಯೊಳಗೆ ಪೂರಕ ದಾಖಲೆಗಳೊಂದಿಗೆ ಸಂಬಂಧಪಟ್ಟ ತಾಲೂಕಿನ ಸಹಾಯಕ ನಿರ್ದೇಶಕರು ಸಮಾಜ ಕಲ್ಯಾಣ ಇಲಾಖೆಯ ಕಚೇರಿಯಲ್ಲಿ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಯನ್ನು ಜಂಟಿ ನಿರ್ದೇಶಕರ ಕಚೇರಿ ಸಮಾಜ ಕಲ್ಯಾಣ ಇಲಾಖೆ ವಿಜಯನಗರ ಹಾಗೂ ಸಂಬಂಧ ಪಟ್ಟ ತಾಲೂಕಿನ ಸಹಾಯಕ ನಿರ್ದೇಶಕರ ಕಚೇರಿಯಿಂದ ಪಡೆಯತಕ್ಕದ್ದು ಎಂದು ವಿಜಯನಗರ ಜಿಲ್ಲೆಯ ಸಮಾಜ ಕಲ್ಯಾಣ ಇಲಾಖೆಯ ಜಂಟಿ ನಿರ್ದೇಶಕರಾದ ಮಂಜುನಾಥ್ ಎಚ್.ವಿ ತಿಳಿಸಿದ್ದಾರೆ.

# ಬಕ್ರೀದ್ ಹಬ್ಬಕ್ಕೆ ಒಂಟೆ, ಗೋವುಗಳ ಕಳ್ಳಸಾಗಣೆ, ಹತ್ಯೆ ನಿಷೇಧ: ಎಡಿಸಿ ಝುಬೇರ್

**ಹಂಪಿ ಟೈಮ್ಸ್ ಬಳ್ಳಾರಿ**

ಬಕ್ರೀದ್ ಹಬ್ಬದ ಪ್ರಯುಕ್ತ ಅನಧಿಕೃತವಾಗಿ ಒಂಟೆ/ಗೋವುಗಳ ಹತ್ಯೆ ಮಾಡುವುದು ಅಪರಾಧವಾಗಿದ್ದು, ಸರ್ಕಾರದ ಕಾನೂನು ಮತ್ತು ನಿಯಮಗಳನ್ನು ಪಾಲಿಸಬೇಕು ಎಂದು ಅಪರ ಜಿಲ್ಲಾಧಿಕಾರಿ ಮೊಹಮ್ಮದ್ ಝುಬೇರ್ ಅವರು ಹೇಳಿದರು.

ಕಚೇರಿಯ ಸಭಾಂಗಣದಲ್ಲಿ ಏರ್ಪಡಿಸಿದ್ದ ಸಭೆಯ ಅಧ್ಯಕ್ಷತೆವಹಿಸಿ ಶನಿವಾರ ಮಾತನಾಡಿದರು. ಹಬ್ಬದ ಸಂದರ್ಭದಲ್ಲಿ ಹೊರ ರಾಜ್ಯಗಳಿಂದ ಮತ್ತು ಹೊರ ಜಿಲ್ಲೆಗಳಿಂದ ಪ್ರಾಣಿಗಳನ್ನು ಕಳ್ಳ ಸಾಗಾಣಿಕೆ ಮಾಡುವುದು ಅಪರಾಧವಾಗಿದೆ. ಸಾರ್ವಜನಿಕರು ಯಾವುದೇ ಸಂದರ್ಭದಲ್ಲಿ ಉಲ್ಲಂಘನೆ ಮಾಡಬಾರದು. ಉಲ್ಲಂಘಿಸಿದವರ ವಿರುದ್ದ ಕಟ್ಟುನಿಟ್ಟಿನ ಕ್ರಮ ಜರುಗಿಸಲಾಗುವುದು ಎಂದು ಎಚ್ಚರಿಕೆ ನೀಡಿದರು. ಉತ್ಪತ್ತಿಯಾಗುವ ತ್ಯಾಜ್ಯವನ್ನು ಸಾರ್ವಜನಿಕ ಸ್ಥಳಗಳಲ್ಲಿ ಹಾಕದಂತೆ ಎಚ್ಚರಿಕೆ ವಹಿಸುವುದು ಕಡ್ಡಾಯವಾಗಿದ್ದು, ಕಸ ವಿಲೇವಾರಿ ವಾಹನಗಳಿಗೆ ತ್ಯಾಜ್ಯ ನೀಡಬೇಕು ಎಂದು ಸೂಚಿಸಿದರು. ಕಾನೂನು ಬಾಹಿರವಾಗಿ ಯಾರಾದರೂ ಒಂಟೆ, ಗೋಹತ್ಯೆ ಮಾಡುವುದು ಕಂಡುಬಂದಲ್ಲಿ ಸಾರ್ವಜನಿಕರು ಜಿಲ್ಲಾಡಳಿತ, ಪಶುಸಂಗೋಪನೆ ಇಲಾಖೆ, ಪೊಲೀಸ್ ಇಲಾಖೆ, ಮಹಾನಗರ ಪಾಲಿಕೆ ಹಾಗೂ ನಗರಸಭೆ, ಪಟ್ಟಣ ಪಂಚಾಯಿತಿ, ಗ್ರಾಮ ಪಂಚಾಯತಿಗಳಿಗೆ ಮಾಹಿತಿಯನ್ನು ನೀಡಬಹುದು ಎಂದರು. ವಿವಿಧ ಇಲಾಖೆಗಳ ಅಧಿಕಾರಿಗಳು ಉಪಸ್ಥಿತರಿದ್ದರು

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA